ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

SHRIDEVI EDUCATION

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 4, ಸಂಚಿಕೆ 6, ಏಪ್ರಿಲ್ 2026

SHRIDEVI ANTARANGA
Monthly Magazine




ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.




**ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ತುಮಕೂರಿನಂತಹ ಎರಡನೇ ಸ್ತರದ ನಗರದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪಾಲ್ಗೊಳ್ಳುವುದು ಸಾಮಾನ್ಯದ ಸಂಗತಿ ಏನೂ ಅಲ್ಲ. ಹಾಗೆ ನೋಡಿದರೆ ರಾಜ್ಯದ ಅರೆ ವೈದ್ಯಕೀಯಶಿಕ್ಷಣದ ದೃಷ್ಟಿಯಿಂದಲೂ ಇದೊಂದು ಮಹತ್ತ್ವದ ಹೆಜ್ಜೆಯಾಗಿದೆ.

## ಅಲೈಡ್ ಹೆಲ್ತ್‌ಸೈನ್ಸ್‌ಕೇರ್‌ಗೆ ಸುವರ್ಣಕಾಲ ಬರಲಿ




**ಡಾ. ರಮಣ್ ಹುಲಿನಾಯ್ಕರ್, ಡಾ. ಯು.ಟಿ.ಇಫ್ತಿಕಾರ್ ಫರೀದ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ಎಂ. ಆರ್. ಹುಲಿನಾಯ್ಕರ್, ಡಾ. ನಾಗರಾಜ್ ಸೂರ್ಯದೇವರ, ಡಾ. ಹಾಜಿ ಅಬ್ದುಲ್ ಅಲಿ ಬಿನ್ ರಾಜಾ ಮೊಹಮ್ಮದ್, ಸಹ ಪ್ರಾಧ್ಯಾಪಕ ಡಾ. ಮುಹಮ್ಮದ್ ಇನ್ಸಿಶಾಮುಲ್ ಹಕ್.**

ನಮ್ಮ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಾಗಿರುವ ಅಲೈಡ್ ಹೆಲ್ತ್‌ಸೈನ್ಸ್ ವಿಭಾಗವು ಮಲೇಷ್ಯಾದ MAHSA ವಿಶ್ವವಿದ್ಯಾನಿಲಯ ಏಪ್ರಿಲ್ 3ರಿಂದ 5ರವರೆಗೆ ವಿದ್ಯಾರ್ಥಿಗಳು, ಬೋಧಕರು ಹಾಗೂ ಕ್ಲಿನಿಕಲ್‌ತಜ್ಞರ ಜೊತೆಗೆ ಸಂವಾದ, ವಿಚಾರಗೋಷ್ಠಿ ಮೊದಲಾದ ಶೈಕ್ಷಣಿಕ ಕಾರ್ಯಕ್ರಮ ಇಟ್ಟುಕೊಂಡಿರುವ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಯಿತು. ಅರೆ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ವಿನೂತನ ಪ್ರಯತ್ನವೆಂದರೆ ತಪ್ಪಿಲ್ಲ. ತುಮಕೂರಿನಂತಹ ಎರಡನೇ ಸ್ತರದ ನಗರದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪಾಲ್ಗೊಳ್ಳುವುದು ಸಾಮಾನ್ಯದ ಸಂಗತಿ ಏನೂ ಅಲ್ಲ. ಹಾಗೆ ನೋಡಿದರೆ ರಾಜ್ಯದ ಅರೆ ವೈದ್ಯಕೀಯಶಿಕ್ಷಣದ ದೃಷ್ಟಿಯಿಂದಲೂ ಇದೊಂದು ಮಹತ್ತ್ವದ ಹೆಜ್ಜೆಯಾಗಿದೆ.

ಇದಕ್ಕೆ ಕಾರಣಕರ್ತರಾದ ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್. ನೇತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಿಕೆಯಾದ ಡಾ. ಲಾವಣ್ಯರಮಣ್, ಅಲೈಡ್ ಹೆಲ್ತ್‌ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ, ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ, ಅಸೋಸಿಯೇಟ್ ಪ್ರಾಧ್ಯಾಪಕರಾದ ಡಾ. ವಿ. ಪವಿತ್ರ ಮತ್ತು ಉಪನ್ಯಾಸಕರಾದ ಎಸ್. ರಾಜ್‌ಕುಮಾರ್ ಅವರುಗಳನ್ನು ಅಭಿನಂದಿಸಬೇಕು.

ಈ ಶೈಕ್ಷಣಿಕ ಪ್ರವಾಸವನ್ನು ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದರು. ಶ್ರೀದೇವಿ ಅಲೈಡ್ ಹೆಲ್ತ್‌ಸೈನ್ಸ್‌ನ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯ ಪ್ರಕಾಶನಕ್ಕೆ ಇದೊಂದು ಉತ್ತಮ ವೇದಿಕೆಯಾಗಿತ್ತು. ಇಂತಹ ಮರೆಯಲಾಗದ ಅನುಭವ ಅವರ ಜೀವನದ ಉದ್ದಕ್ಕೂ ಸಹಾಯ ಮಾಡುತ್ತದೆ.

ಅಲೈಡ್ ಹೆಲ್ತ್‌ಸೈನ್ಸ್ ವಿಭಾಗದವರು ಸಂಘಟಿಸಿದ ಈ ಶೈಕ್ಷಣಿಕ ಕಾರ್ಯಕ್ರಮವು ಎಲ್ಲಾ ವಿಭಾಗದವರಿಗೂ ಪ್ರೇರಣೆ ಕೊಡಬೇಕು. ಇಂದು ಕೊಠಡಿಯಲ್ಲಿ ಹಳೆಯ ನೋಟ್ಸ್ ಇಟ್ಟುಕೊಂಡು ಬಂದು ಒಂದು ಗಂಟೆಯ ಉಪನ್ಯಾಸ ನೀಡುವ ಬೋಧಕರು ತಮ್ಮ ಕರ್ತವ್ಯ ಮುಗಿದು ಹೋಯಿತು ಎಂದು ಭಾವಿಸುವ ಹಾಗಿಲ್ಲ. ಬೆರಳಿನ ತುದಿಯಲ್ಲಿ ಜ್ಞಾನಕೋಶವೇ ಅಡಕವಾಗಿರುವಾಗ ವಿದ್ಯಾರ್ಥಿಗಳು ಅಧ್ಯಾಪಕರಿಗಿಂತ ಮೊದಲೇ ಪಠ್ಯವಿಚಾರವನ್ನು ಕುರಿತು ಅನೇಕ ವಿಷಯಗಳನ್ನು ತಿಳಿದುಕೊಂಡಿರುತ್ತಾರೆ. ಇಂದು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಪಠ್ಯಕ್ರಮದ ಜೊತೆಗೆ ಕೌಶಲ್ಯ ಹಾಗೂ ಆತ್ಮವಿಶ್ವಾಸವನ್ನು ವೃದ್ಧಿಸುವಂತೆ ಮಾಡಬೇಕು. ಈ ದಿಸೆಯಲ್ಲಿ ಇಂತಹ ಶೈಕ್ಷಣಿಕ ಪ್ರವಾಸಗಳು ಅಪಾರವಾದ ಸಹಾಯವನ್ನು ಮಾಡುತ್ತವೆ.

▶▶ 2ನೇ ಪುಟಕ್ಕೆ...




ಕರ್ನಾಟಕರಾಜ್ಯ ಅಲೈಡ್ ಹೆಲ್ತ್‌ಸೈನ್ಸ್ ಕೌನ್ಸಿಲ್ ಅಧ್ಯಕ್ಷರಾದ ಡಾ. ಯು.ಟಿ.ಇಫ್ತಿಕಾರ್ ಫರೀದ್ ಅವರ ಸನ್ಮಾನದಲ್ಲಿ ಮಾಹ್ಸಾ ವಿಶ್ವವಿದ್ಯಾಲಯದ ಕುಲಪತಿ ಡಾ.ಇಕ್ರಮ್ ಷಾ ಬಿನ್ ಇಸ್ಮಾಯಿಲ್, ಉಪಕುಲಪತಿ ಹಾಗೂ ಸಹಪ್ರಾಧ್ಯಾಪಕ ಪ್ರೊ. ಡಾ. ವೆರೋನಿಕಾಚುವಾ ಪೋಹ್ ಚೂ, ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಆರ್. ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ರಮಣ್ ಹುಲಿನಾಯ್ಕರ್, ಡಾ. ಲಾವಣ್ಯ ರಮಣ್ ಮತ್ತು ಡಾ. ಎಂ ಸಿ ಕೃಷ್ಣ ಅವರುಗಳು ಭಾಗಿಯಾಗಿದ್ದರು.

# ತುಮಕೂರಿನ ಶ್ರೀದೇವಿ ಅಲೈಡ್ ಹೆಲ್ತ್‌ಸೈನ್ಸ್ ಮತ್ತು ಮಲೇಷಿಯಾದ MAHSAಗಳ ನಡುವೆ ಶೈಕ್ಷಣಿಕ ಒಡಂಬಡಿಕೆ



▪ ವರದಿ: ಎನ್.ಭಾರತಿ

ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತುಮಲೇಷಿಯಾ MAHSA ವಿಶ್ವವಿದ್ಯಾಲಯಗಳು ಮಹತ್ವದ ಶೈಕ್ಷಣಿಕ ಒಡಂಬಡಿಕೆಗೆ ಮಲೇಷಿಯಾ ರಾಜಧಾನಿ ಕೌಲಾಲಂಪುರ್ ನಗರದಲ್ಲಿ 2026ರ ಏಪ್ರಿಲ್ 3ರಂದು ನಡೆದ ಕಾರ್ಯಕ್ರಮದಲ್ಲಿ ಸಹಿ ಹಾಕಿದವು. ಅರೆ ವೈದ್ಯಕೀಯ ಕೋರ್ಸ್‌ಗಳಿಗೆ ಸಂಬಂಧಪಟ್ಟ ಈ ಒಪ್ಪಂದವು ಕರ್ನಾಟಕ ರಾಜ್ಯ ಅಲೈಡ್ ಹೆಲ್ತ್‌ಸೈನ್ಸ್ ಕೌನ್ಸಿಲ್‌ನ ಅಧ್ಯಕ್ಷರಾದ ಡಾ.ಯು.ಟಿ.ಇಫ್ತಿಕಾರ್ ಫರೀದ್ ಅವರ ಉಪಸ್ಥಿತಿಯಲ್ಲಿ ಏರ್ಪಟ್ಟಿತು.

ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ MAHSA ವಿಶ್ವವಿದ್ಯಾಲಯ ಕುಲಪತಿಯವರು ಎರಡೂ ದೇಶಗಳ ರಾಷ್ಟ್ರಧ್ವಜಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ಶೈಕ್ಷಣಿಕ ಒಪ್ಪಂದವನ್ನು ಅನುಮೋದಿಸಿದರು.

ಕರ್ನಾಟಕರಾಜ್ಯ ಅಲೈಡ್ ಹೆಲ್ತ್‌ಸೈನ್ಸ್ ಕೌನ್ಸಿಲ್‌ನ ಅಧ್ಯಕ್ಷರಾದ ಡಾ.ಯು.ಟಿ. ಇಫ್ತಿಕಾರ್ ಫರೀದ್ ಅವರು ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ, "ಇಂದು ಆರೋಗ್ಯಕ್ಷೇತ್ರದಲ್ಲಿ ವೈದ್ಯರ ಜೊತೆಗೆ ಅರೆ–ವೈದ್ಯಕೀಯ ಸಿಬ್ಬಂದಿಯ ಕೌಶಲವೂ ಮಹತ್ತ್ವವನ್ನು ಪಡೆದುಕೊಳ್ಳುತ್ತಿದೆ. ವೈದ್ಯಕೀಯ ಕ್ಷೇತ್ರದ ಆಧಾರಸ್ತಂಭವಾಗಿರುವ ಅಲೈಡ್ ಹೆಲ್ತ್‌ಸೈನ್ಸ್‌ನ ಯುವಸಂಶೋಧಕರು ಕ್ಷೇತ್ರದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾಗಿದೆ. ಚಿಕಿತ್ಸೆಯ ದೃಷ್ಟಿಯಿಂದ ಪ್ರಸ್ತುತ ವೈದ್ಯಕೀಯ ಕ್ಷೇತ್ರವು ಅದ್ಭುತ ಬೆಳವಣಿಗೆ ಕಂಡಿದೆ. ಜ್ಞಾನ, ಆವಿಷ್ಕಾರ ಹಾಗೂ ಸಂಶೋಧನೆಗಳು ಈಗ ವೈದ್ಯಕೀಯ ಕ್ಷೇತ್ರದ ಪ್ರಮುಖ ಆಶಯಗಳಾಗಿವೆ. ಇದನ್ನು ಗಮನದಲ್ಲಿರಿಸಿಕೊಂಡು, ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯು MAHSA ವಿಶ್ವವಿದ್ಯಾನಿಲಯದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ಇಂತಹ ಶೈಕ್ಷಣಿಕ ಒಡಂಬಡಿಕೆಗಳನ್ನು ಅನುಷ್ಠಾನ ಮಾಡಲು ಕರ್ನಾಟಕ ಸರ್ಕಾರವು ಎಲ್ಲ ರೀತಿಯ ನೆರವು ನೀಡಲಿದೆ" ಎಂದು ಡಾ.ಯು.ಟಿ. ಇಫ್ತಿಕಾರ್ ಫರೀದ್‌ಅವರು ಹೇಳಿದರು.

ಇದೇ ಸಂದರ್ಭದಲ್ಲಿ MAHSAದ ವಿಶ್ವವಿದ್ಯಾಲಯದ ಕುಲಪತಿ ಡಾ.ಇಕ್ರಮ್ ಷಾ ಬಿನ್ ಇಸ್ಮಾಯಿಲ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ "ಇಂದು ಆರೋಗ್ಯ ಕ್ಷೇತ್ರವು ವಿಶ್ವವ್ಯಾಪಕತೆಯನ್ನು ಪಡೆದುಕೊಳ್ಳುತ್ತಿದ್ದು, ಸಮಾಜದ ಎಲ್ಲಾ ವರ್ಗಗಳ ರೋಗಿಗಳಿಗೂ ವೈದ್ಯರು ಹಾಗೂ ಅರೆ–ವೈದ್ಯಕೀಯ ಸಿಬ್ಬಂದಿಯ ಸೇವೆ ದೊರೆಯಬೇಕಾಗಿದೆ. ವಿವಿಧ ದೇಶಗಳು ತಮ್ಮಲ್ಲಿರುವ ಕ್ಲಿನಿಕಲ್ ಶಿಷ್ಟಾಚಾರವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ರೋಗಿಗಳಿಗೆ ಉತ್ತಮ ಸೇವೆ ಲಭ್ಯವಾಗಿಸಬಹುದು. ವೈದ್ಯಕೀಯ ಕ್ಷೇತ್ರವು ಉದ್ಯೋಗ ಸೃಷ್ಟಿಯಲ್ಲೂ ಮಹತ್ತ್ವದ ಪಾತ್ರ ವಹಿಸುತ್ತಿರುವುದು ಗಮನಿಸಬೇಕಾದ ಮತ್ತೊಂದು ಸಂಗತಿ" ಎಂದು ಅಲೈಡ್ ಹೆಲ್ತ್‌ಸೈನ್ಸ್‌ನ ಮಹತ್ತ್ವವನ್ನು ವಿವರಿಸಿದರು.

▶▶ 8ನೇ ಪುಟಕ್ಕೆ...

# ಅಲೈಡ್ ಹೆಲ್ತ್‌ಸೈನ್ಸ್‌ಕೇರ್‌ಗೆ ಸುವರ್ಣಕಾಲ ಬರಲಿ



**ಪ್ರೊಫೆಸರ್ ಟಾನ್ ಶ್ರೀ ಡಾಟುಕ್ ಡಾ. ಹಜ್ ಮೊಹಮ್ಮದ್ ಹನಿಫ್ಹಾ ಬಿನ್ ಹಜ್ ಅಬ್ದುಲ್ಲಾ ಪ್ರೊ–ಚಾನ್ಸಲರ್ ಹಾಗೂ ಕಾರ್ಯನಿರ್ವಹಣಾ ಅಧ್ಯಕ್ಷರು**



**ಡಾ. ಹಾಜಿ ಅಬ್ದುಲ್ ಅಲಿ ಬಿನ್ ರಾಜಾ ಮೊಹಮ್ಮದ್, ಉಪ ಡೀನ್ ಹಾಗೂ MAHSA ವಿಶ್ವವಿದ್ಯಾಲಯತುತುರ್ತು ವೈದ್ಯಕೀಯ ವಿಭಾಗದ ಮುಖ್ಯಸ್ಥರು**



**ಡಾ. ಕುಪ್ಪುಸ್ವಾಮಿ ಮುರುಗೇಶನ್, ಸಹ ಪ್ರಾಧ್ಯಾಪಕ, ಅನಾಟಮಿ ವಿಭಾಗ, ಇಂಟರ್ನ್ಯಾಷನಲ್ ಹೈಯರ್ ಸ್ಕೂಲ್ ಆಫ್ ಮೆಡಿಸಿನ್, ಕಿರ್ಗಿಜಸ್ತಾನ್**

▶▶ ಮೊದಲನೇ ಪುಟದಿಂದ

ಮಲೇಷಿಯಾಯಾದ MAHSA ಕಡೆಯಿಂದಲೂ ಈ ಶೈಕ್ಷಣಿಕ ಪ್ರವಾಸ ಯಶಸ್ವಿಯಾಗಲು ಉತ್ತಮವಾದ ಸಹಕಾರ, ಸಹಾಯ ದೊರಕಿರುವುದನ್ನು ನಾವು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಮಲೇಷ್ಯಾದವರು ವ್ಯವಸ್ಥೆ ಮಾಡಿದ್ದ ವೇದಿಕೆಯ ಕಾರ್ಯಕ್ರಮ, ಐದು ವಿಚಾರ ಸಂಕಿರಣಗಳು, ಸಂವಾದ, 36 ಪ್ರಬಂಧ ಮಂಡನೆಗಳು ಅವರ ಆಸ್ಪತ್ರೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ನೀಡಿದ ಭೇಟಿ, ವಿದ್ಯಾರ್ಥಿಗಳಿಗೆ ಸ್ಥಳೀಯ ಪ್ರವಾಸಕ್ಕೆ ಮಾಡಿಕೊಟ್ಟ ಅನುಕೂಲ ಮೊದಲಾದವುಗಳನ್ನು ಪ್ರವಾಸದಲ್ಲಿ ಪಾಲ್ಗೊಂಡ ಎಲ್ಲರೂ ಸ್ಮರಿಸುತ್ತಾರೆ. ಎಲ್ಲ ಕಾರ್ಯಕ್ರಮಗಳಲ್ಲೂ ಅವರ ಸಮಯಪ್ರಜ್ಞೆ ಹಾಗೂ ಅಚ್ಚುಕಟ್ಟುತನ ಕಾಣಿಸುತ್ತಿತ್ತು. ಅದನ್ನು ನಮ್ಮ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗದವರು ಗುರುತಿಸಿದರು. ಈ ಶೈಕ್ಷಣಿಕ ಪ್ರವಾಸದ ಯಶಸ್ಸು ಮಲೇಷ್ಯಾದ MAHSA ಸಂಸ್ಥೆಗೆ ಸಿಂಹಪಾಲು ದೊರೆಯುತ್ತದೆ. ಅವರುಗಳಲ್ಲಿ ಕಾರ್ಯಕ್ರಮದ ಸಂಯೋಜಕರಾಗಿ ಡಾ. ನಾಗರಾಜ್ ಸೂರ್ಯದೇವರು ನಮಗೆ ಎಲ್ಲ ರೀತಿಯಲ್ಲೂ ಸಹಾಯಕರಾಗಿದ್ದರು. ತೆಲಂಗಾಣ ರಾಜ್ಯದ ಡಾ. ನಾಗರಾಜ್ ಅವರು ಪಾದರಸದಂತೆ ಓಡಾಡಿಕೊಂಡು ಎಲ್ಲವನ್ನು ಅತ್ಯುತ್ತಮವಾಗಿ ಸಂಘಟನೆ ಮಾಡಿದ್ದರು.

ಬೆಳಿಗ್ಗೆ MAHSA ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳೊಡನೆ ನಡೆಸಿದ ಸಂವಾದ ಮತ್ತು ಶ್ರೀದೇವಿ ವಿದ್ಯಾಸಂಸ್ಥೆಯು ಅವರೊಡನೆ ಮಾಡಿಕೊಳ್ಳುವ ಶೈಕ್ಷಣಿಕ ಒಪ್ಪಂದಗಳು ಮಹತ್ವಪೂರ್ಣದ ವಿಚಾರವಾಗಿದೆ. MAHSAದ ಶೈಕ್ಷಣಿಕ ಪದ್ಧತಿಗೂ ನಮಗೂ ಅಂತಹ ವ್ಯತ್ಯಾಸವಿಲ್ಲ. ಭಾರತದ ಅನೇಕ ತಜ್ಞರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ವಿಶೇಷವಾಗಿ ತಮಿಳುನಾಡಿನ ಅನೇಕರು ಅಲ್ಲಿಯೇ ಹುಟ್ಟಿ ಬೆಳೆದು ಇಂದು ಬಹುದೊಡ್ಡ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಆದರೂ ಅವರು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಮರೆತಿಲ್ಲದಿರುವುದು ನಮಗೆ ಹೆಮ್ಮೆಯ ವಿಚಾರವಾಗಿರುತ್ತದೆ.

ಬೆಳಗ್ಗೆ 9ಗಂಟೆಗೆ MAHSA ವಿಶ್ವವಿದ್ಯಾನಿಲಯದ ಹಿರಿಯ ಅಧಿಕಾರಿಗಳ ಜೊತೆಗೆ ಸಭೆ ಏರ್ಪಾಡು ಆಗಿತ್ತು. ಆ ಸಭೆಯಲ್ಲಿ ಕರ್ನಾಟಕರಾಜ್ಯದ ಅಲೈಡ್ ಹೆಲ್ತ್‌ಕೇರ್‌ಆಯೋಗದ ಅಧ್ಯಕ್ಷರಾದ ಡಾ.ಯು.ಟಿ. ಇಫ್ತಿಕಾರ್ ಫರೀದ್ ಅವರು ಭಾಗವಹಿಸಿದ್ದರು. ಮಲೇಷಿಯಾದ ಕಡೆಯಿಂದ ಆ ವಿಶ್ವವಿದ್ಯಾನಿಲಯದ ಡಾಟೋ. ಡಾ. ಶಹ್ರಿಲ್ ಬಿನ್ ಟಾನ್‌ಶ್ರೀ ದಾತುಕ್ ಡಾ. ಮೊಹಮದ್ ಹನೀಫ, ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರು, ಡಾಟೋಡಾ. ಇಕ್ರಮ್ ಷಾ ಇಸ್ಮೈಲ್, ಉಪಕುಲಪತಿಗಳು, ಪ್ರೊ. ವೆರೋನಿಕಾ ಚುಅ, ಪ್ರೊ–ಉಪಕುಲಪತಿಗಳು, ಡಾ. ವಿನಿಭಾ ರಾಜಕುಮಾರಿ ಇಲ್ಲನ್‌ಕೋವನ್ ಅವರುಗಳು ಭಾಗವಹಿಸಿ ಮಲೇಷಿಯಾ ಅಲೈಡ್ ಹೆಲ್ತ್ ಅಕಾಡೆಮಿಯ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ನೀಡಿದರು. ಅನಂತರ ನಮ್ಮನ್ನು ಅವರ ವಿಶಾಲವಾದ ಕ್ಯಾಂಪಸ್ಸಿಗೆ ಕರೆದುಕೊಂಡು ಹೋಗಿ ಪ್ರತಿಯೊಂದಕ್ಕೂ ವಿವರಣೆ ನೀಡಿ ನಮ್ಮ ಜ್ಞಾನವನ್ನು ಹೆಚ್ಚಿಸಿದರು. ವಿಶೇಷವಾಗಿ ಅನಾಟಮಿಯ ಲ್ಯಾಬ್‌ನಲ್ಲಿ ಡಾ.ಮಹಾಲಿಂಗಂ ಅವರು ಎದೆ, ಕುತ್ತಿಗೆ ಹಾಗೂ ತಲೆಯ ಭಾಗವನ್ನೊಳಗೊಂಡ ಮನುಷ್ಯನ ಶರೀರವನ್ನು ರಾಸಾಯನಿಕಗಳಿಂದ ಸಂಸ್ಕರಿಸಿ ಎಷ್ಟೋ ವರ್ಷದಿಂದ ಜತನದಿಂದ ಕಾಪಾಡಿಕೊಂಡು ಬಂದಿರುವುದನ್ನು ನೋಡಿ, ಆಶ್ಚರ್ಯ ಹಾಗೂ ಅವರ ಬಗ್ಗೆ ಗೌರವ ಭಾವನೆ ಮೂಡಿಬಂತು.

MAHSA ವಿಶ್ವವಿದ್ಯಾನಿಲಯವು ಒಂದು ಖಾಸಗಿ ವಿಶ್ವವಿದ್ಯಾನಿಲಯವಾಗಿದ್ದು, ಅದರ ನಿರ್ಮಾಪಕರು ಪ್ರೊ. ಟಾನ್ ಶ್ರೀ ದಾತುಕ್ ಡಾ. ಎಚ್.ಜೆ. ಮೊಹಮದ್ ಹನೀಫ್ ಬಿನ್ ಎಚ್.ಜೆ ಅಬ್ದುಲ್ಲಾ, ಕುಲಪತಿಗಳು ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರು ಬಹಳ ಶ್ರಮವಹಿಸಿ ವಿಶ್ವವಿದ್ಯಾನಿಲಯವನ್ನು ಕಟ್ಟಿದ್ದಾರೆ. ಶಾಲಾ ಕೊಠಡಿಗಳು, ಡಿಜಿಟಲ್ ಗ್ರಂಥಾಲಯಗಳು, ಕ್ರೀಡಾ ಸಮುಚ್ಚಯ, ರಂಗಚಟುವಟಿಕೆಯ ಸ್ಥಳ, ಲ್ಯಾಬ್‌ಗಳು, ಆಸ್ಪತ್ರೆ, ವಾರ್ಡ್‌ಗಳು ಎಲ್ಲದರಲ್ಲಿಯೂ ಅವರು ತಮ್ಮ ವಿಶೇಷತೆಯನ್ನು ಮೆರೆದಿದ್ದಾರೆ. ಇಂತಹ ವಿಶ್ವವಿದ್ಯಾನಿಲಯ ನಿರ್ಮಿಸುವುದು ಸುಲಭ ಮಾತಲ್ಲ, ಅದಕ್ಕೆ ಅಪಾರವಾದ ಬದ್ಧತೆ, ಸಂಪನ್ಮೂಲ ಮತ್ತು ದೂರದೃಷ್ಟಿಯ ಚಿಂತನೆಯ ಅಗತ್ಯವಿದೆ. ಇವುಗಳನ್ನು ಈ ಸಂಸ್ಥೆಯ ನಿರ್ಮಾಪಕರಲ್ಲಿ ಕಾಣಬಹುದಾಗಿದೆ.

ಮಧ್ಯಾಹ್ನ ನಡೆದ ವಿಚಾರಗೋಷ್ಠಿ ಮತ್ತು ಸಂವಾದದಲ್ಲಿ ಎಲ್ಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು ಮತ್ತು ಹಲವರು. ವಿಚಾರಪೂರ್ಣವಾದ ಪ್ರಬಂಧಗಳನ್ನು ಮಂಡಿಸಿದರು. ಡಾ. ಹಾಜಿಅಬ್ದುಲ್ ಅಲಿ ಬಿನ್ ರಾಜ ಮೊಹಮದ್, ಡಾ ಮುಹಮ್ಮದ್ ಇಹ್ತಿಷಮುಲ್ ಹಕ್, ಡಾ. ಸೆಲ್ವಕುಮಾರ್ ಅನ್ಬಳಗನ್ ಮತ್ತು ಡಾ. ಕುಪ್ಪುಸಾಮಿ ಮುರುಗೇಸನ್, ಶ್ರೀದೇವಿ ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ ಸೇರಿದಂತೆ ಅನೇಕ ವಿದ್ವಾಂಸರು ಈ ವಿಚಾರಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ವೈದ್ಯಕೀಯಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಈ ವಿದ್ವಾಂಸರುಗಳು ನೀಡಿದ ಮಾರ್ಗದರ್ಶನ ತುಂಬಾ ಮಹತ್ವಪೂರ್ಣದ್ದಾಗಿತ್ತು. ಅದರಲ್ಲೂ ವಿದ್ಯಾರ್ಥಿಗಳ ಜ್ಞಾನವಿಸ್ತರಣೆಗೆ ಅವರು ಬಹಳಷ್ಟು ಸಹಾಯ ಮಾಡಿದರು. ಇದರಲ್ಲಿ ಪಾಲುಗೊಂಡ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಗೆ MAHSA ವಿಶ್ವವಿದ್ಯಾನಿಲಯ ಪ್ರಮಾಣಪತ್ರ ನೀಡಿ ಸನ್ಮಾನಿಸಿತು.

ವೈದ್ಯಕೀಯ ಶಿಕ್ಷಣದಲ್ಲಿರುವಂತೆ ಅರೆ ವೈದ್ಯಕೀಯ ಶಿಕ್ಷಣದಲ್ಲೂ 'ರಾಷ್ಟ್ರೀಯ ಸಹಾಯಕ ಮತ್ತು ಆರೋಗ್ಯ ವೃತ್ತಿಪರ ಆಯೋಗ'ವನ್ನು (National Commission for Allied and Healthcare Profession NCAHP) ಭಾರತ ಸರ್ಕಾರ ರಚಿಸಿದೆ. ಪ್ರಸ್ತುತ ಡಾ.ಯಜ್ಞಾ ಉನ್ಮೇಶ್ ಶುಕ್ಲಾ ಇದರ ಅಧ್ಯಕ್ಷರಾಗಿದ್ದಾರೆ. ಈ ಆಯೋಗವು ಸಹಾಯಕ ಮತ್ತು ಆರೋಗ್ಯ ವೃತ್ತಿಪರರ ಶಿಕ್ಷಣದ ನಿಯಂತ್ರಣದ ಜೊತೆಗೆ ವ್ಯವಸ್ಥೆಗಳನ್ನು ಬಲಪಡಿಸಲು ಗಮನ ಕೊಟ್ಟಿದೆ. 2026 ಮಾರ್ಚ್‌ಲ್ಲಿ ಆರೋಗ್ಯ ವ್ಯವಸ್ಥೆಗಳ ಬಲವರ್ಧನೆಗೆ ಮಹತ್ವದ ವರದಿಯೊಂದನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. 'ಅಲೈಡ್ ಮತ್ತು ಆರೋಗ್ಯಸೇವೆಗಳ ಸಾಮರ್ಥ್ಯವನ್ನು ಸಬಲಗೊಳಿಸುವುದು' (Strengthening Allied & Healthcare Capacity) ಎನ್ನುವುದು ಇದರ ಶೀರ್ಷಿಕೆ.

2021ರ ಎನ್.ಸಿ.ಎ.ಎಚ್.ಪಿ (NCAHP) ಕಾಯ್ದೆಯನ್ನು ಅನುಷ್ಠಾನ ಮಾಡಲು ಭಾರತ ಸರ್ಕಾರ ತೀರ್ಮಾನ ಮಾಡಿದೆ. ಈ ಕಾಯ್ದೆಯ ಉದ್ದೇಶಗಳಲ್ಲಿ ಸಹಾಯಕ ಮತ್ತು ಆರೋಗ್ಯ ವೃತ್ತಿಪರ ಶಿಕ್ಷಣ  ಮತ್ತು ಆರೋಗ್ಯ ಸೇವೆಗಳ ಗುಣಮಟ್ಟವನ್ನು ಕಾಪಾಡುವುದು, ಸ್ಥಳೀಯ ಸಂಸ್ಥೆಗಳ ಮೌಲ್ಯಮಾಪನ ಮಾಡುವುದು, ವೃತ್ತಿಪರರಿಗಾಗಿ ಕೇಂದ್ರ ಮತ್ತು ರಾಜ್ಯಮಟ್ಟದ ನೋಂದಣಿಗೆ ವ್ಯವಸ್ಥೆ ಮಾಡುವುದು, ಜೊತೆಗೆ ಆರೋಗ್ಯ ಸೇವೆಗಳ ಪ್ರವೇಶ ಮತ್ತು ವಿತರಣೆಯಲ್ಲಿ ಸುಧಾರಣೆಗೆ ಆಧುನಿಕ ವೈಜ್ಞಾನಿಕ ಮಾನದಂಡಗಳನ್ನು ಅಳವಡಿಸಿಕೊಂಡು ಈ ಕ್ಷೇತ್ರದಲ್ಲಿ ಸಂಶೋಧನೆಗೆ ಉತ್ತೇಜಿಸುವುದು ಸೇರಿವೆ. ಎನ್.ಎಂ.ಸಿ. (ವೈದ್ಯಕೀಯ ಶಿಕ್ಷಣ) ಡಿ.ಸಿ.ಐ, (ದಂತ ವೈದ್ಯಕೀಯ ಶಿಕ್ಷಣ) ಮತ್ತು ಐ.ಎನ್.ಸಿ (ನರ್ಸಿಂಗ್ ಶಿಕ್ಷಣ) ಮೊದಲಾದ ರಾಷ್ಟ್ರೀಯ ಮಟ್ಟದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಂತೆ, ಅಲೈಡ್ ಹೆಲ್ತ್ ಪ್ರೊಫೆಷನಲ್‌ನ ಶಿಕ್ಷಣ ಮತ್ತು ವೃತ್ತಿಗೆ ಅನುಕೂಲವಾಗುವ ಉನ್ನತ ಮಟ್ಟದ ಸಂಸ್ಥೆ ಬೇಕೆನ್ನುವ ಉದ್ದೇಶದಿಂದ ಎನ್.ಸಿ.ಎ.ಎಚ್.ಪಿ ರಚನೆಯಾಗಿದೆ. ಈ ಕಾಯಿದೆ ಒಟ್ಟು 57 ಆರೋಗ್ಯ ಕ್ಷೇತ್ರದ ವೃತ್ತಿಗಳನ್ನು ಗುರುತಿಸಿದ್ದು, ಅವುಗಳನ್ನು 10 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ.

ದೇಶಾದ್ಯಂತ ಅರೆ ವೈದ್ಯಕೀಯ ಶಿಕ್ಷಣದಲ್ಲಿ ಏಕರೂಪತೆ, ವೃತ್ತಿನಿಷ್ಠೆ ಹಾಗೂ ಸೇವೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದನ್ನು ಇದು ಖಚಿತಪಡಿಸುತ್ತದೆ. ಭಾರತ ಸರ್ಕಾರದ ಎನ್.ಸಿ.ಎ.ಎಚ್.ಪಿ ಕಾಯ್ದೆಯನ್ನು ಒಪ್ಪಿಕೊಂಡು ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಕರ್ನಾಟಕರಾಜ್ಯ ಅಲೈಡ್ ಮತ್ತು ಆರೋಗ್ಯ ಸೇವಾ ವೃತ್ತಿನಿರತರ ಪರಿಷತ್ತು (Karnataka State Allied and Health Care Professions Council) (KSAHC) ಸಂಸ್ಥೆಯನ್ನು ಪ್ರಾರಂಭಿಸಿದೆ.

ತುಮಕೂರು ನಗರದಲ್ಲಿರುವ ಶ್ರೀದೇವಿ ಪ್ಯಾರಾಮೆಡಿಕಲ್ ಮತ್ತು ಅಲೈಡ್ ಆರೋಗ್ಯಸೇವಾ ವಿಜ್ಞಾನ ಸಂಸ್ಥೆ (Shridevi Institute of Paramedical and Allied Health Sciences) ಅರೆ–ವೈದ್ಯಕೀಯ ಕೋರ್ಸ್‌ಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ತರಬೇತಿಯನ್ನು ಒದಗಿಸಲು ಕಂಕಣಬದ್ಧವಾಗಿ ದುಡಿಯುತ್ತಿದೆ. ಈ ಸಂಸ್ಥೆಯಲ್ಲಿ ಹತ್ತು ಬಿ.ಎಸ್.ಸಿ ಕೋರ್ಸ್‌ಗಳಿವೆ. ಎಂಟು ಎಂ.ಎಸ್‌ಸಿ. ಕೋರ್ಸ್‌ಗಳಿವೆ ಮತ್ತು ಏಳು ಡಿಪ್ಲೋಮೋ ಕೋರ್ಸ್‌ಗಳಿವೆ. ಇದರಲ್ಲಿ ಸುಮಾರು ಎರಡುಸಾವಿರ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಈ ಕಾಲೇಜಿಗೆ ಹೊಂದಿಕೊಂಡಂತೆ ಶ್ರೀದೇವಿ ವೈದ್ಯಕೀಯ ಕಾಲೇಜು ಕೆಲಸ ಮಾಡುತ್ತಿದ್ದು, ಒಂದು ಸಾವಿರ ಹಾಸುಗೆಗಳ ಸುಸಜ್ಜಿತ ಆಸ್ಪತ್ರೆಯಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಧುನಿಕ ಸಾಧನೆಗಳನ್ನು ಒಳಗೊಂಡ ಪ್ರಯೋಗಾಲಯವಿದೆ. ಇಪ್ಪತ್ತು ನುರಿತ ಅಧ್ಯಾಪಕರಿದ್ದಾರೆ. ಅದರಲ್ಲಿ ನಾಲ್ಕು ಜನ ಪಿ.ಹೆಚ್‌ಡಿ. ಗಳಿಸಿದ್ದಾರೆ. ಅಂತಾರಾಷ್ಟ್ರೀಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಪ್ರಬಂಧಗಳನ್ನು ಮಂಡಿಸಿರುವ ಪ್ರಾಧ್ಯಾಪಕರು ಮತ್ತು ಅಧ್ಯಾಪಕರು ಈ ಸಂಸ್ಥೆಯಲ್ಲಿದ್ದಾರೆ. ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಆಯ್ಕೆಯ ಮೂಲಕ ಆಯ್ಕೆಯಾಗಿ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅವಕಾಶ ಕೂಡ ದೊರಕಿದೆ. ಇಲ್ಲಿನ ವಿದ್ಯಾರ್ಥಿಯೊಬ್ಬರು ಇತ್ತೀಚಿಗೆ ಪಿ.ಎಚ್‌ಡಿ. ಪಡೆದಿರುತ್ತಾರೆ.

ಅಲೈಡ್ ಹೆಲ್ತ್‌ಕೇರ್ ವಿದ್ಯಾರ್ಥಿಗಳಿಗೆ ಭಾರತದಲ್ಲಿ ಮಾತ್ರವಲ್ಲ, ವಿಶ್ವದ ಎಲ್ಲೆಡೆ ಮಾನ್ಯತೆ ದೊರೆಯುತ್ತಿದೆ, ಈ ಶಿಕ್ಷಣ ಮತ್ತು ತರಬೇತಿಗೆ ಅತ್ಯುನ್ನತ ನಿಯಮಾವಳಿಗಳನ್ನು ರಚಿಸುವುದರ ಮೂಲಕ ಮುಂದೆ ಬರುವ ವಿದ್ಯಾರ್ಥಿಗಳು ವೃತ್ತಿಪರತೆಯನ್ನು ಮೈಗೂಡಿಸಿಕೊಳ್ಳಲು ಸಹಾಯ ಮಾಡಲಾಗಿದೆ. ಭಾರತ ಸರ್ಕಾರ ಅರೆ ವೈದ್ಯಕೀಯ ವೃತ್ತಿಪರರನ್ನು ಹೆಚ್ಚು ಹೆಚ್ಚಾಗಿ ಸೃಷ್ಟಿಸಲು ಈ ಸಾಲಿನ ಆಯವ್ಯಯದಲ್ಲಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆ. ▶▶ 4ನೇ ಪುಟಕ್ಕೆ...




**ಡಾ. ಸೆಲ್ವಕುಮಾರ್ ಅನ್ಬಳಗನ್, ಡಾ. ಹಾಜಿ ಅಬ್ದುಲ್ ಅಲಿ ಬಿನ್ ರಾಜಾ ಮೊಹಮ್ಮದ್, ಡಾ. ಕುಪ್ಪುಸ್ವಾಮಿ ಮುರುಗೇಶನ್, ಡಾ. ವೆರೋನಿಕಾ ಚುವಾ ಪೋ ಚೂ, ಡಾ. ನಾಗರಾಜ್ ಸೂರ್ಯದೇವರ, ಡಾ. ಇಕ್ರಮ್ ಶಾ ಇಸ್ಮಾಯಿಲ್, ಡಾ. ಎಂ. ಆರ್. ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಸಹ ಪ್ರಾಧ್ಯಾಪಕ ಡಾ. ಮುಹಮ್ಮದ್ ಇನ್ತಿಶಾಮುಲ್ ಹಕ್, ಡಾ. ಯು. ಟಿ. ಇಫ್ತಿಕಾರ್ ಫರೀದ್, ಡಾ. ರಮಣ್ ಎಂ. ಹುಲಿನಾಯ್ಕರ್ , ಡಾ. ವಿನಿಭಾ ಇಲ್ಲಾಂಕೋವನ್, ಡಾ. ಲಾವಣ್ಯ ರಮಣ್, ಡಾ. ರೇಖಾ ಗುರುಮೂರ್ತಿ, ಡಾ. ಚಂದ್ರಪ್ಪ ಸಿ.ಪಿ. ಡಾ. ಸತೀಶ ಟಿ.ಜಿ., ಶ್ರೀಮತಿ ಭಾರತಿ ಕಮಲೇಶ್.**

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**
ಪುಟ ವಿನ್ಯಾಸ:
**ಸುಮಾ ಸಾಗರ್**

# ಪ್ರವಾಸೋದ್ಯಮ ಮತ್ತು ಅಭಿವೃದ್ಧಿಯ ತಾಣ ಮಲೇಷಿಯಾ

▪ **ಡಾ.ಎಂ.ಆರ್. ಹುಲಿನಾಯ್ಕರ್**



ಏಪ್ರಿಲ್ 3ರಿಂದ 5ವರೆಗೆ ಮಲೇಷಿಯಾ ಪ್ರವಾಸ ಕೈಗೊಳ್ಳಬೇಕು ಎನ್ನುವ ವಿಚಾರ ತಿಳಿದು ಅಪರಿಮಿತವಾದ ಆನಂದವಾಯಿತು.

ಮಲೇಷಿಯಾ ನಮ್ಮ ನೆರೆಹೊರೆಯ ರಾಷ್ಟ್ರ ಮಾತ್ರವಲ್ಲ, ನಮ್ಮ ಸೋದರ ರಾಜ್ಯವಾಗಿರುವ ತಮಿಳುನಾಡಿನವರು ಯಥೇಚ್ಛ ಸಂಖ್ಯೆಯಲ್ಲಿರುವ ಪ್ರದೇಶವು ಹೌದು! ಇಂದಿಗೂ ಮಲೇಷಿಯಾದ ಮೂಲ ನಿವಾಸಿಗಳು ಮಲಯ ಭಾಷೆಯನ್ನೇ ಮಾತನಾಡುತ್ತಾರೆ. ತಮಿಳು ಭಾಷೆಯನ್ನು ತಮಿಳಿಗರು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಕನ್ಫ್ಯೂಷಿಯಸ್ ಅನುಯಾಯಿಗಳು, ತೋಷಿಮಾ, ಸಿಕ್ಕರು ಮೊದಲಾದ ವಿವಿಧ ಜನಾಂಗದವರು ಮಲೇಷ್ಯಾದಲ್ಲಿ ಸೌಹಾರ್ದಯುತವಾಗಿ ಬಾಳ್ವೆ ನಡೆಸುತ್ತಿದ್ದಾರೆ.

ಮಲೇಷಿಯಾದ ರಾಜಧಾನಿ ಕೌಲಾಲಂಪುರ್‌ಕ್ಕೆ ನಮ್ಮ ಭೇಟಿ ಸೀಮಿತಗೊಂಡಿದ್ದರೂ ವೈಯಕ್ತಿಕ ಆಸಕ್ತಿಯಿಂದಾಗಿ ಅಲ್ಲಿನ ಅನೇಕ ವಿಚಾರಗಳನ್ನು ತಿಳಿದುಕೊಂಡೆ. ಮಲಯ ಎನ್ನುವ ಶಬ್ದ ರಾಮಾಯಣದಲ್ಲೂ ಕಾಣಿಸಿಕೊಳ್ಳುತ್ತದೆ. ಪ್ರಾಚೀನಕಾಲದಲ್ಲಿ ಈ ಪ್ರದೇಶದಲ್ಲಿ ಹಿಂದೂಧರ್ಮ ದೊಡ್ಡ ಪ್ರಮಾಣದಲ್ಲಿತ್ತು. ಮೌರ್ಯರ ದೊರೆ ಅಶೋಕ ಹಾಗೂ ಚೀನಾದ ಕೆಲವು ಧಾರ್ಮಿಕ ನಾಯಕರು ಬೌದ್ಧಧರ್ಮವನ್ನು ಈ ಪ್ರದೇಶಕ್ಕೆ ತಂದರು. ಇಂದಿಗೂ ಮಲೇಷ್ಯಾದಲ್ಲಿ ಬೌದ್ಧಧರ್ಮೀಯರು ಅಪಾರ ಪ್ರಮಾಣದಲ್ಲಿದ್ದಾರೆ.

ಹತ್ತನೆಯ ಶತಮಾನದಲ್ಲಿ ಮಲೇಷಿಯಾಕ್ಕೆ ಇಸ್ಲಾಂ ಧರ್ಮ ಪ್ರವೇಶ ಪಡೆಯಿತು. 15ನೆಯ ಶತಮಾನದ ಹೊತ್ತಿಗೆ ಇದೊಂದು ಪ್ರಮುಖ ಧರ್ಮವಾಗಿ ಪ್ರವರ್ಧಮಾನಕ್ಕೆ ಬಂದಿತ್ತು. ಮಲಕ್ಕಾಸುಲ್ತಾನರು ಹಾಗೂ ಬ್ರೂನಿಸುಲ್ತಾನರು ಈ ಪ್ರದೇಶವನ್ನು ಆಳಿದ ಪ್ರಮುಖ ರಾಜಮನೆತನಗಳಾಗಿವೆ.

ಕ್ರಿ.ಶ. 1511ರಲ್ಲಿ ಪೋರ್ಚುಗೀಸರು ಇಲ್ಲಿಗೆ ಆಗಮಿಸಿದರು. ಅವರನ್ನು ಅನುಸರಿಸಿ ಅನೇಕ ಯೂರೋಪಿನ ವ್ಯಾಪಾರಗಾರರೂ ಇಲ್ಲಿಗೆ ಬಂದಿದ್ದರು. 1841ರಲ್ಲಿ ಮಲೇಷಿಯಾಕ್ಕೆ ಬ್ರಿಟಿಷರು ಆಗಮಿಸಿ 'ಈಸ್ಟ್ ಇಂಡಿಯಾ ಕಂಪನಿಯನ್ನು' ಪ್ರಾರಂಭಿಸಿ, ಗಣಿಗಾರಿಕೆ ಮತ್ತು ರಬ್ಬರ್ ಕೃಷಿಯನ್ನು ಕೈಗೊಂಡರು.

ವಿಶ್ವದ ಎರಡನೇ ಮಹಾಯುದ್ಧದ ತನಕ ಯುರೋಪ್ ರಾಷ್ಟ್ರಗಳು ಮಲೇಷಿಯವನ್ನು ತಮ್ಮ ಮುಖ್ಯ ತಾಣವನ್ನಾಗಿ ಮಾಡಿಕೊಂಡಿದ್ದವು. ಮಲೇಷಿಯಾದಲ್ಲಿನ ಸ್ವಾಭಾವಿಕ ಬಂದರು ಅವರ ವಾಣಿಜ್ಯೋದ್ಯಮಕ್ಕೆ ಉತ್ತಮ ಸಹಾಯ ಮಾಡಿದವು. ಇದೇ ಸಂದರ್ಭದಲ್ಲಿ ಸ್ವಲ್ಪಕಾಲ ಜಪಾನ್ ಕೂಡ ಮಲೇಷಿಯವನ್ನು ವಶಪಡಿಸಿಕೊಂಡಿತ್ತು.

1957 ಆಗಸ್ಟ್ 31ರಂದು ಮಲೇಷಿಯಾಕ್ಕೆ ಸ್ವಾತಂತ್ರ್ಯ ದೊರೆಯಿತು. 1965ರಲ್ಲಿ ಮಲೇಷಿಯಾ ಒಕ್ಕೂಟದಿಂದ ಸಿಂಗಾಪುರವು ಹೊರಬಂದ ಅನಂತರ ಮಲೇಷಿಯಾ ಸ್ವತಂತ್ರ ಒಕ್ಕೂಟ



ಶ್ರೀ ಮುರುಗನ್‌ಸ್ವಾಮಿಯ ಪಾದದಡಿ ಡಾ. ಹುಲಿನಾಯ್ಕರ್ ಮತ್ತು ಚಿ.ಯುವಾನ್ ರಮಣ್ ಹುಲಿನಾಯ್ಕರ್



ಡಾ. ರಮಣ್, ಡಾ. ಲಾವಣ್ಯ, ಡಾ. ಪಿಳ್ಳಪ್ಪ, ಶ್ರೀಮತಿ ರೂಪಾ ಪಿಳ್ಳಪ್ಪ, ಶ್ರೀಮತಿ ಶಾಂತಾದುರ್ಗಾದೇವಿ, ಡಾ. ಎಂ. ಆರ್. ಹುಲಿನಾಯ್ಕರ್, ಡಾ. ಕಮಲೇಶ್, ಶ್ರೀಮತಿ ಎನ್. ಭಾರತಿ ಮತ್ತು ಚಿ.ಯುವಾನ್ ರಮಣ್ ಹುಲಿನಾಯ್ಕರ್



ಇಸ್ಲಾಂ ಶೈಲಿಯಲ್ಲಿ ಬ್ರಿಟಿಷರು ನಿರ್ಮಿಸಿರುವ ರೈಲ್ವೆ ನಿಲ್ದಾಣ.

ರಾಷ್ಟ್ರವನ್ನು ನಿರ್ಮಾಣ ಮಾಡಿಕೊಂಡಿತು.

ಪ್ರಸ್ತುತ ಮಲೇಷ್ಯಾದಲ್ಲಿ 13 ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ಆಡಳಿತವಿದೆ. ಮಲೇಷ್ಯಾದಲ್ಲಿನ ಒಂಬತ್ತು ರಾಜಮನೆತನಗಳಿದ್ದು ಐದು ವರ್ಷಕ್ಕೊಮ್ಮೆ ಸರದಿಯ ಪ್ರಕಾರ ಒಂದೊಂದು ರಾಜಮನೆತನದವರು ಆ ದೇಶದ ಪ್ರಮುಖ ರಾಜಪ್ರಮುಖರಾಗಿ ಅಧಿಕಾರ ಸ್ವೀಕರಿಸುತ್ತಾರೆ. ಈ ವ್ಯವಸ್ಥೆಯನ್ನು 'ಯಾಂಗ್ ಡಿ–ಪೆರ್ಟುವಾನ್ ಅಗೊಂಡ್' ಎಂದು ಕರೆಯುತ್ತಾರೆ. ಅವರು ದೊರೆಗಳೆಂದು ಮಾನ್ಯತೆ ಪಡೆದಿದ್ದಾರೆ. ಅವರಿಗೆ ನಮ್ಮ ದೇಶದಲ್ಲಿ ರಾಷ್ಟ್ರಪತಿಗಳಿಗಿರುವ ಸ್ಥಾನಮಾನಗಳಿರುತ್ತವೆ. ಇಲ್ಲಿನ ರಾಜಪ್ರಮುಖರು ಜನರಿಂದ ಆಯ್ಕೆಯಾದ ನಾಯಕನಿಗೆ ಪ್ರಧಾನಮಂತ್ರಿಯಾಗಿ ಪ್ರಮಾಣವಚನವನ್ನು ಬೋಧಿಸುತ್ತಾರೆ.

ಮಲೇಷಿಯಾದಲ್ಲಿ ಪ್ರಸ್ತುತ 34ದಶಲಕ್ಷ ಜನಸಂಖ್ಯೆ ಇದೆ. ಬಹುಸಂಸ್ಕೃತಿಯ ದೇಶವಾದರೂ ಇಸ್ಲಾಂ ಅಧಿಕೃತ ಧರ್ಮವಾಗಿ ಮಾನ್ಯತೆ ಪಡೆದಿದೆ. ಇತರ ಎಲ್ಲ ಧರ್ಮದವರಿಗೂ ಅವರ ಆಚರಣೆಯನ್ನು ನಡೆಸಿಕೊಂಡು ಹೋಗಲು ಯಾವುದೇ ನಿರ್ಬಂಧವಿರುವುದಿಲ್ಲ. ಮಲಯ, ಇಂಗ್ಲಿಷ್, ಚೀನಿ ಹಾಗೂ ತಮಿಳು ಭಾಷೆಗಳು ಈ ದೇಶದ ಪ್ರಮುಖ ಭಾಷೆಗಳಾಗಿರುತ್ತವೆ.

1970ರ ತನಕ ಕೃಷಿ ಆಧಾರಿತ ಆರ್ಥಿಕತೆಯಲ್ಲಿದ್ದ ಮಲೇಷಿಯಾವು ಒಮ್ಮೆಲೇ ಕೈಗಾರಿಕೆ ಹಾಗೂ ವೈಜ್ಞಾನಿಕ ಆಧಾರಿತ ಆರ್ಥಿಕತೆಗೆ ಬದಲಾಯಿತು. 1980ರಲ್ಲಿ ಪ್ರಧಾನಿ ಮಹಾತಿರ್ ಮೊಹಮ್ಮದ್ ಅವರ ನೇತೃತ್ವದಲ್ಲಿ ದೇಶ ಹೊಸ ಆರ್ಥಿಕ ಬೆಳವಣಿಗೆಯನ್ನು ಕಾಣತೊಡಗಿತು. ಇಂದಿನ ಪ್ರಧಾನಿಗಳು ಮಾನ್ಯ ಅನ್ವರ್ ಇಬ್ರಾಹಿಂ. ಇವರು ಈ ದೇಶದ ಹತ್ತನೆಯ ಪ್ರಧಾನಿ. 2022 ನವೆಂಬರ್ 24ರಂದು ಅಧಿಕಾರ ಸ್ವೀಕರಿಸಿರುವ ಅನ್ವರ್‌ಇಬ್ರಾಹಿಂ ಅವರು ಐ.ಟಿ. ಉದ್ಯಮಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ.

ಇಂದು ಮಲೇಷಿಯಾ ದಕ್ಷಿಣ ಏಷ್ಯಾದ ಪ್ರಮುಖ ಶೈಕ್ಷಣಿಕ ಕೇಂದ್ರವೆಂದು ಪ್ರಸಿದ್ಧಿಯಾಗಿದೆ, ಮಹಾತಿರ್ ಮೊಹಮ್ಮದ್ ಅವರ ಅವಧಿಯಲ್ಲಿ 'ಪೆಟ್ರೋನಾಸ್ ಟವರ್' ನಿರ್ಮಾಣವಾಯಿತು. ಆಗ ಇದು ಜಗತ್ತಿನ ಅತಿ ಎತ್ತರದ ಗೋಪುರವೆಂದು ಪ್ರಸಿದ್ಧಿಯಾಗಿತ್ತು

ಮಲೇಷಿಯಾ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ. ಆ ದೇಶದ ಜಿಡಿಪಿಗೆ ಶೇಕಡ



ಪ್ರಪಂಚದ ಅತಿ ಎತ್ತರದ ಅವಳಿ ಗೋಪುರಗಳು ವಿದ್ಯುತ್ ಬೆಳಕಿನಲ್ಲಿ.

15ರಷ್ಟು ಪಾಲನ್ನು ಮಲೇಷ್ಯಾದ ಪ್ರವಾಸೋದ್ಯಮ ನೀಡುತ್ತಿದೆ. ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರಕ್ಕೂ ಪ್ರವಾಸೋದ್ಯಮ ಹೆಚ್ಚಿನ ಪ್ರೇರಣೆ ನೀಡಿದೆ. 2024–25ರ ಮಾನವಅಭಿವೃದ್ಧಿ ಸೂಚ್ಯಂಕದಲ್ಲಿ ಮಲೇಷಿಯಾ ದೇಶವು 63ನೆಯ ಸ್ಥಾನ ಗಳಿಸುವುದರ ಮೂಲಕ ತಾನೊಂದು ಅಭಿವೃದ್ಧಿ ಶೀಲ ರಾಷ್ಟ್ರವೆಂಬುದನ್ನು ಸಾಬೀತು ಮಾಡಿದೆ.

Putrajaya (ಪುತ್ರಜಯ) ಮಲೇಷಿಯಾದ ಫೆಡರಲ್ ಸರ್ಕಾರದ ಕೇಂದ್ರ ಸ್ಥಾನ. ಪ್ರಧಾನಮಂತ್ರಿ ಮತ್ತು ಅವರ ಸಚಿವರು, ವಿವಿಧ ಆಡಳಿತ ಶಾಖೆಗಳಿವೆ. 21ನೆಯ ಶತಮಾನದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣ ಮಾಡಿದ ಪ್ರದೇಶವಿದು. ಉದ್ಯಾನವನಗಳ ನಗರವೆಂದು ಕರೆಯುವಷ್ಟರ ಮಟ್ಟಿಗೆ ಇಲ್ಲಿ ಹಸಿರು ತುಂಬಿ ತುಳುಕುತ್ತಿದೆ.

ಸುಮಾರು 250 ಎಕರೆ ಪ್ರದೇಶದಲ್ಲಿರುವ Putrajaya (ಪುತ್ರಜಯ) ಬಟಾನಿಕಲ್ ಗಾರ್ಡನ್‌ನಲ್ಲಿರುವ 700ಕ್ಕೂ ಹೆಚ್ಚಿನ ಅಪರೂಪದ ಸಸ್ಯಪ್ರಭೇದಗಳಿವೆ. ಇಲ್ಲಿ ಕೃತಕವಾಗಿ ನಿರ್ಮಿತವಾದ ಸರೋವರವು ಈ ನಗರ ನಿರ್ಮಾಪಕರ ಶ್ರೇಷ್ಠ ಅಭಿರುಚಿಯನ್ನು ಪ್ರತಿಬಿಂಬಿಸುತ್ತದೆ. ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಸಮೀಪದಲ್ಲಿರುವ ಈ ಪ್ರದೇಶಕ್ಕೆ ಗಣನೀಯ ಪ್ರಮಾಣದಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ.

ಮಲೇಷಿಯಾದ ಅತ್ಯಂತ ಆಕರ್ಷಣೀಯ ಸ್ಥಳವೆಂದರೆ ಕೆ.ಎಲ್.ಸಿ.ಸಿ.ಯಲ್ಲಿರುವ 88 ಅಂತಸ್ತಿನ ಪೆಟ್ರೋನಾಸ್ ಕಟ್ಟಡ. ಇಲ್ಲಿ ಅವಳಿ ಗಗನಚುಂಬಿ ಗೋಪುರಗಳಿವೆ. ಇದು ಮಲೇಷ್ಯಾದ ಅತ್ಯಂತ 'ಆಕರ್ಷಣೀಯ ಸ್ಥಳವಾಗಿದೆ. ಪ್ರತಿ ಗೋಪುರವು 451.9 ಮೀಟರ್‌ಎತ್ತರದಲ್ಲಿದೆ. ಎರಡು ಗೋಪುರಗಳ 41–42 ಮಹಡಿಗಳನ್ನು 'ಡಬಲ್ ಡೆಕ್ಕರ್‌ಸ್ಕೈ' ಸೇತುವೆ ಒಂದುಗೂಡಿಸಿವೆ. ಇದು ನೆಲದ ಮಟ್ಟಕ್ಕಿಂತ 170 ಮೀಟರ್ ಎತ್ತರದಲ್ಲಿದೆ. ಇದರ 86ನೆಯ ಮಹಡಿಯಿಂದ ಕೌಲಾಲಂಪುರ್ ನಗರವನ್ನು ವೀಕ್ಷಿಸುವುದು ಅತ್ಯಂತ ರೋಮಾಂಚನಕಾರಿಯಾಗಿರುತ್ತದೆ.

1381 ಅಡಿ ಎತ್ತರದ ಕೌಲಾಲಂಪುರ್ ದೂರಸಂಪರ್ಕ ಗೋಪುರವು ಈ ನಗರದ ಮುಖ್ಯ ಆಕರ್ಷಣೆಯಾಗಿದೆ. ಈ ಗೋಪುರದಿಂದಲೂ ನಗರದ ವೀಕ್ಷಣೆಯನ್ನು ಮಾಡಬಹುದು. ಅದರ ಕೆಳಗಡೆ ಮಳೆಯ ನೀರಿನ ಸಂಸ್ಕರಣ ಘಟಕವಿದ್ದು, ಅಲ್ಲಿ ಅತ್ಯಂತ ಸುಂದರವಾದ ಉದ್ಯಾನವನವನ್ನು ನಿರ್ಮಾಣ ಮಾಡಲಾಗಿದೆ. ಇದನ್ನು ನಾಗರಿಕರ ವಾಕಿಂಗ್ ಸ್ಥಳವೆಂದು ನಿರ್ದೇಶನ ಮಾಡಲಾಗಿದೆ.

ಮಲೇಷಿಯಾ ಅತ್ಯಂತ ಪವಿತ್ರ ಸ್ಥಳವೆಂದು ಪರಿಗಣಿತವಾಗಿರುವುದು ಬಟುಕೇವ್ಸ್ (Batu Caves). 365 ಮೆಟ್ಟಲುಗಳನ್ನು ಏರಿ ಹೋದರೆ ಶ್ರೀಮುರುಗನ್ ಹಾಗೂ ಶ್ರೀವಲ್ಲಿ ದೇವಾಲಯಗಳು ಕಾಣಸಿಗುತ್ತವೆ. ಅನೇಕ ಭಕ್ತರು ಉತ್ಸಾಹದಿಂದ ಮೆಟ್ಟಲು ಏರಿ ಹೋಗಿ ಶ್ರೀಮುರುಗನ್ ಮತ್ತು ಶ್ರೀವಲ್ಲಿಯವರ ದರ್ಶನ ಪಡೆಯುತ್ತಾರೆ. ಗುಹೆಯ ಮುಂಭಾಗದಲ್ಲಿ ಸುಮಾರು ಅರವತ್ತು ಅಡಿ ಎತ್ತರದ ಸುಂದರವಾದ ಶ್ರೀಮುರುಗನ್‌ಮೂರ್ತಿ ನಿರ್ಮಾಣ ಮಾಡಲಾಗಿದೆ. ಇದು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಈ ಆವರಣದಲ್ಲಿ ಶ್ರೀವಿನಾಯಕ ದೇವಸ್ಥಾನ, ಶ್ರೀಆಂಜನೇಯಸ್ವಾಮಿ ದೇವಸ್ಥಾನ, ಶ್ರೀಮೀನಾಕ್ಷಿ ಅಮ್ಮನವರ ದೇವಸ್ಥಾನ ಹಾಗೂ ಶ್ರೀದುರ್ಗಾಮಾತೆಯ ದೇವಸ್ಥಾನಗಳಿವೆ. ಸ್ಥಳೀಯ ತಮಿಳು ಜನರು ಈ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ವರ್ಷಕ್ಕೊಮ್ಮೆ ಬ್ರಹ್ಮರಥೋತ್ಸವ ನಡೆಸುತ್ತಾರೆ. ಜೊತೆಗೆ ಪ್ರವಾಸಿಗರಂತೂ ನಿರಂತರವಾಗಿ ಇಲ್ಲಿಗೆ ಭೇಟಿಕೊಡುತ್ತಿರುತ್ತಾರೆ. ಸಾಕಷ್ಟು ಮಂಗಗಳನ್ನು ಇಲ್ಲಿ ಕಾಣಬಹುದು.

1957ರ ಆಗಸ್ಟ್‌ನಲ್ಲಿ ಮಲೇಶಿಯಾ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಸ್ಥಳ ಮೆರ್ಡೆಕ್ ಚೌಕ. ಇಲ್ಲಿ ಮಲೇಷಿಯಾ ದೇಶದ ರಾಷ್ಟ್ರ ಧ್ವಜವಿದೆ. ಜೊತೆಗೆ 13 ರಾಜ್ಯಗಳ ಧ್ವಜಗಳನ್ನೂ ಕಾಣಬಹುದು.

ಜಮೇಕಾಮಸೀದಿಯ ಗೋಪುರವು ಪಾಟಲ ಮತ್ತು ಬಿಳಿ ಬಣ್ಣದಿಂದ ಕೂಡಿದ್ದು ತನ್ನದೇ ಆದ ಆಕರ್ಷಣೆಯನ್ನು ಹೊಂದಿದೆ. 15ನೆಯ ಶತಮಾನದಿಂದಲೂ ಇಲ್ಲಿರುವ ಅನೇಕ ಮಸೀದಿಗಳಲ್ಲಿ ಇಸ್ಲಾಮಿಕ್ ಕಾಲದ ಅಪರೂಪದ ಕಲಾಕೃತಿಗಳಿವೆ. ಅವುಗಳ ಅಧ್ಯಯನವೇ ದೊಡ್ಡ ಸಾಹಸದ ಕಥೆಯಾಗಬಹುದು. ಮಲೇಷ್ಯಾದಲ್ಲಿ ಇಸ್ಲಾಮಿಕ್ ಆರ್ಟ್ಸ್ ಮ್ಯೂಸಿಯಂ ಅತ್ಯಂತ ಮಹತ್ವದ ಸ್ಥಳವಾಗಿದೆ. ಇಸ್ಲಾಮಿಕ್ ಕಲೆಯ ಬಗ್ಗೆ ಆಸಕ್ತಿಯು ಇದೊಂದು ಪವಿತ್ರ ಕ್ಷೇತ್ರವಾಗಿದೆ. ಅಪರೂಪದ ಕಲಾಕೃತಿಗಳನ್ನು ಇಲ್ಲಿ ನೋಡಬಹುದಾಗಿದೆ. ಇದರ ವಾಸ್ತುಶಿಲ್ಪ ಕೂಡ ಆಸಕ್ತಿದಾಯಕವಾಗಿದೆ. ಜೊತೆಗೆ ಹಳೆಯ ಜವಳಿ ಮತ್ತು ಪಿಂಗಾಣಿ ಸಾಮಾನುಗಳನ್ನು ನೋಡಬಹುದು.

ಕನ್ವೆನ್ಷನ್ ಸೆಂಟರ್‌ನ ಕೆಳಗಿರುವ ಸಾಗರೋದ್ಯನ ಅಕ್ವೇರಿಯಾದಲ್ಲಿ 90 ಮೀಟರ್ ನೀರಿನೊಳಗೆ ಮುಳುಗಿ ಅಲ್ಲಿನ 90ಕ್ಕೂ ಹೆಚ್ಚಿನ ಶಾರ್ಕ್‌ಗಳು, ಕಿರಣಗಳು ಮತ್ತು ಹವಳಗಳನ್ನು ನೋಡುವ ಅವಕಾಶವನ್ನು ಕಲ್ಪಿಸಲಾಗಿದೆ. ಇದು ಸಾಹಸಕ್ರೀಡೆ ಎನಿಸಿಕೊಳ್ಳುತ್ತದೆ.

ಮಲೇಷಿಯಾದ ನೆಗಾರಾ (Negara) ಅಥವಾ ರಾಜಪ್ರಮುಖರು ವಾಸಿಸುವ ಅರಮನೆ ಇಂದಿಗೂ ತನ್ನ ಭವ್ಯತೆಯನ್ನು ಹಾಗೆಯೇ ಕಾಪಾಡಿಕೊಂಡು ಬಂದಿದೆ. ಅದನ್ನು ಹೊರಗಿನಿಂದ ಮಾತ್ರ ನೋಡಬಹುದು. ಈಗಲೂ ಅಲ್ಲಿ ರಾಜಪ್ರಮುಖರು ವಾಸಿಸುತ್ತಿದ್ದಾರೆ.

ಬ್ರಿಟಿಷರು 20ನೆಯ ಶತಮಾನದ ಪ್ರಾರಂಭದಲ್ಲಿ ನಿರ್ಮಿಸಿರುವ ಇಸ್ಲಾಮಿಕ್ ವಾಸ್ತುಶಿಲ್ಪ ಶೈಲಿಯ ರೈಲ್ವೆ ಸ್ಟೇಷನ್ ಜನರ ಆಕರ್ಷಣೀಯ ಸ್ಥಳವಾಗಿದೆ. ಇದರ ಎದುರಿಗೆ ಇರುವ ನೆಲಮಾಳಿಗೆಯಲ್ಲಿ ಮೆಟ್ರೋ ರೈಲ್ವೆ ನಿಲ್ದಾಣವಿದೆ.

ಕೌಲಾಲಂಪುರ್‌ದಿಂದ ಒಂದುಗಂಟೆ ಪ್ರಯಾಣ ಮಾಡಿದರೆ ಜೆಂಟಿಂಗ್ ಹೈಲ್ಯಾಂಡ್ (Genting highland) ದೊರೆಯುತ್ತದೆ. ಎರಡು ಬೆಟ್ಟಗಳ ನಡುವೆ ಕೇಬಲ್‌ಕಾರ್‌ನಲ್ಲಿ ಪ್ರಯಾಣ ಮಾಡುವುದು ರೋಮಾಂಚನಕಾರಿಯಾದ ಅನುಭವವಾಗಿರುತ್ತದೆ. ಈ ಹೈಲ್ಯಾಂಡ್ ಮೌಟುಲಾಕಾಲಿ (Mountula Kali) ಬೆಟ್ಟದ ಸರಹದ್ದಿಗೆ ಬರುತ್ತದೆ.

▸▸ ಮುಂದಿನ ಪುಟಕ್ಕೆ...

▶▶ 3ನೇ ಪುಟದಿಂದ

ಎಂಟುನೂರು ಮೀಟರ್ ಎತ್ತರದಲ್ಲಿರುವ ಪರ್ವತ ಶ್ರೇಣಿಯಲ್ಲಿ ಕೇಬಲ್‌ಕಾರ್‌ನಲ್ಲಿ ಸುಮಾರು 6550 ಎತ್ತರದಲ್ಲಿ ಪ್ರಯಾಣಿಸುತ್ತಿದ್ದಾಗ ಗಾಳಿಯಲ್ಲಿ ಸಂಚರಿಸಿದ ವಿನೂತನ ಅನುಭವವಾಗುತ್ತದೆ. ಮಲೇಷಿಯಾ ಪ್ರವಾಸಿಗರಿಗಾಗಿಯೇ ರೂಪಿತವಾದ ದೇಶ. ಮಲೇಷಿಯಾ ಸರ್ಕಾರದ ಪ್ರಕಾರ 2025ರಲ್ಲಿ 25 ದಶಲಕ್ಷ ಜನರು ಪ್ರವಾಸಕ್ಕಾಗಿ ಮಲೇಶಿಯಾಕ್ಕೆ ಬಂದಿದ್ದರು. ಇಂದು ಮಲೇಶಿಯಾ ಪೆಟ್ರೋಲಿಯಂ ಉತ್ಪನ್ನ, ಗ್ಯಾಸ್, ಪಾಮ್‌ಆಯಿಲ್, ಕಾಡಿನ ಉತ್ಪನ್ನಗಳು, ಎಲೆಕ್ಟ್ರಾನಿಕ್ ಮತ್ತು ರಾಸಾಯನಿಕ ವಸ್ತುಗಳು, ಸೆಮಿಕಂಡಕ್ಟರ್ ಮೊದಲಾದ ಅತ್ಯಾಧುನಿಕ ವಿಷಯಗಳಿಗೆ ಪ್ರಸಿದ್ಧವಾಗಿದೆ. ಜೊತೆಗೆ ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮಕ್ಕೂ ಪ್ರಸಿದ್ಧವಾಗಿದ್ದು, ಇತರ ಅನೇಕ ದೇಶಗಳಿಗೆ ಸ್ಫೂರ್ತಿ ನೀಡುವ ಸಾಮರ್ಥ್ಯವನ್ನು ಪಡೆದಿದೆ. ತನ್ನಲ್ಲಿರುವ ಸಂಪನ್ಮೂಲವನ್ನು ಹೇಗೆ ಸದ್ಬಳಕೆ ಮಾಡಿಕೊಂಡು ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬೇಕು ಎಂಬುದಕ್ಕೆ ಮಲೇಷಿಯಾ ಉದಾಹರಣೆಯಾಗಿದೆ.

ಮಲೇಷಿಯಾ ದೇಶದ ಪ್ರವಾಸ ಕೈಗೊಂಡಾಗ ಆ ರಾಷ್ಟ್ರದ ಬೆಳವಣಿಗೆಯ ಬಗ್ಗೆ ಅಭಿಮಾನ ಮೂಡುವುದರಲ್ಲಿ ಯಾವುದೇ ಸಂಶಯವಿಲ್ಲ.

ಮಲೇಷಿಯಾ ಪ್ರವಾಸದಲ್ಲಿ ನನ್ನ ಜೊತೆಯಲ್ಲಿದ್ದ ಚಿ.ಯುವಾನ್ ರಮಣ್ ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಶ್ರೀಮತಿ ರೂಪ ಪಿಳ್ಳಪ್ಪ. ಡಾ.ಕೆ.ಆರ್.ಪಿಳ್ಳಪ್ಪ, ಶ್ರೀಮತಿ ಎನ್.ಭಾರತಿ, ಡಾ.ಲಾವಣ್ಯರಮಣ್, ಡಾ.ರಮಣ್ ಎಂ.ಹುಲಿನಾಯ್ಕರ್ ಮತ್ತು ಡಾ.ಕೆ.ಆರ್.ಕಮಲೇಶ್ ಅವರುಗಳು ಅಭಿನಂದನೆಗೆ ಅರ್ಹರು. ಪ್ರವಾಸ ಚೇತನೋಹಾರಿಯಾಗಿರಲು ಅವರುಗಳ ಇರುವಿಕೆ ಕಾರಣವಾಗಿತ್ತು.

▪ ನಿರೂಪಣೆ: ಶ್ರೀವತ್ಸ




ಡಾ. ರಮಣ್, ಡಾ. ಲಾವಣ್ಯ, ಡಾ. ಪಿಳ್ಳಪ್ಪ, ಶ್ರೀಮತಿ ರೂಪಾ ಪಿಳ್ಳಪ್ಪ, ಶ್ರೀಮತಿ ಶಾಂತಾದುರ್ಗಾದೇವಿ, ಡಾ. ಹುಲಿನಾಯ್ಕರ್, ಡಾ. ಕಮಲೇಶ್, ಶ್ರೀಮತಿ ಎನ್. ಭಾರತಿ ಮತ್ತು ಚಿ.ಯುವಾನ್ ರಮಣ್ ಹುಲಿನಾಯ್ಕರ್

## ಶ್ರೀದೇವಿ ಅಲೈಡ್ ಹೆಲ್ತ್‌ಕೇರ್ ಸೈನ್ಸ್‌ನ ಮಲೇಷಿಯಾ ಪ್ರವಾಸಕ್ಕೆ ಗಣ್ಯರ ಸಂದೇಶ



ಇದೊಂದು ವಿಶಿಷ್ಟ ಮತ್ತು ಅರ್ಥಪೂರ್ಣ ಸಮ್ಮೇಳನ. ಅಲೈಡ್ ಹೆಲ್ತ್‌ಸೈನ್ಸ್ ವಿಷಯದಲ್ಲಿ ಆಸಕ್ತರಾಗಿರುವ ವಿದ್ಯಾರ್ಥಿಗಳು, ಶಿಕ್ಷಕರು, ಸಂಶೋಧಕರು ಒಂದೇ ವೇದಿಕೆಯಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಶ್ರೀದೇವಿ ಸಮೂಹ ವಿದ್ಯಾಸಂಸ್ಥೆ ರಾಜ್ಯದಲ್ಲಿಯೇ ಅತಿ ಹೆಚ್ಚು ಅಲೈಡ್ ಹೆಲ್ತ್‌ಸೈನ್ಸ್ ಕೋರ್ಸ್‌ಗಳನ್ನು ಹೊಂದಿರುವ, ಬೋಧಿಸುತ್ತಿರುವ ನಾಡಿನ ಏಕೈಕ ಶಿಕ್ಷಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಭಾಜನವಾಗಿದೆ. ಸಾಗರಾದಾಚೆಯ ವೈದ್ಯಕೀಯ ತುರ್ತು ಅಗತ್ಯದ ಮಹತ್ತ್ವವನ್ನು ಕುರಿತಂತೆ ಸಮ್ಮೇಳನ ಏರ್ಪಡಿಸಿರುವ ಶ್ಲಾಘನೀಯವಾದದ್ದು. ತಮಗೆ ಹಾರ್ದಿಕ ಶುಭಾಶಯಗಳು".

**ಡಾ. ಬಿ. ಎಲ್.ಸುಜಾತ ರಾಥೋಡ್**
ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ



"ಅಲೈಡ್ ಹೆಲ್ತ್‌ಸೈನ್ಸ್ ಕುರಿತಂತೆ ಮಲೇಷಿಯಾ ವಿಶ್ವವಿದ್ಯಾಲಯ (ಎಂ.ಎ.ಹೆಚ್.ಎಸ್.ಎ) ಮತ್ತು ತುಮಕೂರಿನ ಶ್ರೀದೇವಿ ಅಲೈಡ್‌ಸೈನ್ಸ್ ವಿಭಾಗದ ಜಂಟಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನವೊಂದನ್ನು ಏರ್ಪಡಿಸಿರುವುದು ಅಭಿಮಾನ ಮತ್ತು ಹೆಮ್ಮೆಯ ಸಂಗತಿ. ವೈಯಕ್ತಿವಾಗಿ ನಾನು ಈ ಸಮ್ಮೇಳನದಲ್ಲಿ ಭಾಗವಹಿಸದಿದ್ದರೂ, ಸಂಪನ್ಮೂಲ ವ್ಯಕ್ತಿಗಳಿಂದ ದೊರಕುವ ಸಲಹೆ, ಸೂಚನೆ, ಅನಿಸಿಕೆ, ಅಭಿಪ್ರಾಯ, ವಿಚಾರಧಾರೆ ಅಳವಡಿಸಿಕೊಳ್ಳಲು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಉತ್ಸುಕವಾಗಿದೆ. ಆರೋಗ್ಯವಲಯದ ಕಠಿಣ ಸವಾಲುಗಳನ್ನು ಎದುರಿಸಲು ಈ ಸಮ್ಮೇಳನ ಮಹತ್ವದ ಕೊಡುಗೆಯನ್ನು ನೀಡಲಿದೆ ಎಂಬ ಆಶಯ ನನ್ನಲ್ಲಿದೆ, ತಮ್ಮ ಪ್ರಯತ್ನಕ್ಕೆ ಅಭಿನಂದನೆಗಳು"

**ಡಾ. ಬಿ.ಸಿ. ಭಗವಾನ್**
ಉಪಕುಲಪತಿ, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ



"ಆರೋಗ್ಯವಲಯದ ವೃತ್ತಿಪರರರಿಗೆ ಮತ್ತು ಶಿಕ್ಷಣತಜ್ಞರಿಗೆ, ಸಂಶೋಧಕರಿಗೆ ಇಂತಹ ಶೈಕ್ಷಣಿಕ ಪ್ರವಾಸ ಬಹಳ ಅಗತ್ಯ. ಆಯಾಯಾ ವಿಷಯದ ವಿಚಾರವಂತರು, ವಿಷಯತಜ್ಞರು ಮತ್ತು ಸಂಪನ್ಮೂಲವ್ಯಕ್ತಿಗಳು ಒಟ್ಟಿಗೆ ಸೇರಿ ವಿಚಾರವಿನಿಮಯ ಮಾಡಿಕೊಳ್ಳುತ್ತಿರುವುದು ಎರಡೂ ಸಂಸ್ಥೆಗಳ ದೃಷ್ಟಿಯಿಂದ ಶ್ಲಾಘನೀಯ ಕಾರ್ಯವೆನಿಸುತ್ತದೆ. ನಿಮ್ಮ ಈ ಪ್ರಯತ್ನ ಭವಿಷ್ಯದಲ್ಲಿ ಅಲೈಡ್ ಹೆಲ್ತ್‌ಸೈನ್ಸ್‌ನ ಜನಪ್ರಿಯತೆಗೆ ಮತ್ತು ಪುರೋಭಿವೃದ್ಧಿಗೆ ವರದಾನವಾಗಲಿದೆ".

**ಡಾ. ಎಸ್.ಟಿ. ಶ್ರೀನಿವಾಸಮೂರ್ತಿ**
ಉಪನಿರ್ದೇಶಕರು,
ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಅಲೈಡ್ ಹೆಲ್ತ್‌ಸೈನ್ಸ್ ಕೌನ್ಸಿಲ್

# ಅಲೈಡ್ ಹೆಲ್ತ್‌ಸೈನ್ಸ್‌ಕೇರ್‌ಗೆ ಸುವರ್ಣಕಾಲ ಬರಲಿ

▶▶ 2ನೇ ಪುಟದಿಂದ

ಭಾರತ ಸರ್ಕಾರದ 2026–27ರ ಆಯವ್ಯಯದಲ್ಲಿ ಅಲೈಡ್ ಹೆಲ್ತ್‌ಕೇರ್‌ಸೈನ್ಸ್‌ಗೆ ಹೆಚ್ಚಿನ ಆದ್ಯತೆ ಕೊಟ್ಟಿರುವುದು ಕಂಡುಬರುತ್ತದೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿವರ್ಷ ಒಂದು ಲಕ್ಷ 'ಅಲೈಡ್ ಹೆಲ್ತ್‌ಕೇರ್ ವೃತ್ತಿಪರ'ರನ್ನು ಸೃಷ್ಟಿಮಾಡುವುದಾಗಿ ಭಾರತ ಸರ್ಕಾರ ಭರವಸೆ ಕೊಟ್ಟಿದೆ. 'ನೇತ್ರತಪಾಸಣಾ ಶಾಸ್ತ್ರ' (Optometry), 'ವಿಕಿರಣಶಾಸ್ತ್ರ' (Radiology) 'ಅರಿವಳಿಕೆಶಾಸ್ತ್ರ ಮತ್ತು ಶಸ್ತ್ರಚಿಕಿತ್ಸಾ ತಂತ್ರಜ್ಞಾನ' (Anaesthesiology and Technology for Surgery) 'ಆನ್ವಯಿಕ ಮನೋವಿಜ್ಞಾನ' (Applied Psychology) ಮತ್ತು 'ವರ್ತನ ಆರೋಗ್ಯ' (Behavioural Health) ಮುಂತಾದ ಅನೇಕ ಅರೆ ವೈದ್ಯಕೀಯ ವಿಜ್ಞಾನ ಶಾಖೆಗಳಲ್ಲಿ ವೃತ್ತಿಪರರನ್ನು ಸೃಷ್ಟಿಸುವುದು ಕೇಂದ್ರ ಸರ್ಕಾರದ ಗುರಿಯಾಗಿದೆ. ಇದರಿಂದ ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಮತ್ತು ದೇಶದ ಆರೋಗ್ಯ ಸೇವಾವಲಯಕ್ಕೆ ಅಗತ್ಯವಿರುವ ಸಂಪನ್ಮೂಲ ವ್ಯಕ್ತಿಗಳು ದೊರೆಯುತ್ತಾರೆ.

ಭಾರತ ಕೇವಲ ಐ.ಟಿ ಉದ್ಯೋಗಿಗಳನ್ನು ಮಾತ್ರ ಸೃಷ್ಟಿಸುವುದಿಲ್ಲ, ಅರೆ ವೈದ್ಯಕೀಯ ಕ್ಷೇತ್ರದಲ್ಲೂ ಕುಶಲ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಶಕ್ತಿಯನ್ನು ಪಡೆದಿದೆ ಎಂಬುದನ್ನು ನಿರೂಪಿಸುವ ಕಾಲ ಬಂದಿದೆ. ಇದರಿಂದ ವಿದೇಶದಿಂದಲೂ ನಮ್ಮ ಅರೆ ವೈದ್ಯಕೀಯಕ್ಷೇತ್ರದ ಮಾನವಸಂಪನ್ಮೂಲ ವ್ಯಕ್ತಿಗಳಿಗೆ ಅಪಾರ ಬೇಡಿಕೆ ಕಂಡುಬರುತ್ತಿದೆ.

ಇಂತಹ ಮಹತ್ವದ ಗುರಿಯನ್ನು ಅನುಷ್ಠಾನ ಮಾಡಲು ನಮಗೊಬ್ಬ ನಾಯಕರ ಅಗತ್ಯವಿತ್ತು. ಅಂತಹ ನಾಯಕರು ಕರ್ನಾಟಕ ರಾಜ್ಯಕ್ಕೆ ಈಗ ದೊರಕಿದ್ದಾರೆ. ಅವರೆಂದರೆ 'ಕರ್ನಾಟಕ ರಾಜ್ಯದ ಅಲೈಡ್ ಹೆಲ್ತ್‌ಕೇರ್ ಆಯೋಗ'ದ ಅಧ್ಯಕ್ಷರಾಗಿರುವ ಡಾ.ಯು.ಟಿ.ಇಫ್ತಿಕಾರ್ ಫರೀದ. ಅವರೂ ನಮ್ಮ ಜೊತೆ ಮಲೇಷಿಯಾಕ್ಕೆ ಬಂದಿದ್ದರು. ಡಾ.ಯು.ಟಿ.ಇಫ್ತಿಕಾರ್ ಫರೀದ ಅವರು ಅಲೈಡ್ ಹೆಲ್ತ್‌ಸೈನ್ಸ್ ಬಗ್ಗೆ ಅಮೂಲ್ಯವಾದ ಪಾಂಡಿತ್ಯವನ್ನು ಹೊಂದಿದ್ದಾರೆ. ಈ ಜ್ಞಾನಶಾಖೆಯನ್ನು ಬೆಳೆಸುವ ಸಾಮರ್ಥ್ಯವನ್ನು ಪಡೆದಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಅಲೈಡ್ ಹೆಲ್ತ್‌ಕೇರ್ ಸೈನ್ಸ್‌ನ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ. ಡಾ.ಯು.ಟಿ.ಇಫ್ತಿಕಾರ್ ಫರೀದ ಅವರು ಈ ಕ್ಷೇತ್ರಕ್ಕೆ ಅಮೂಲ್ಯವಾದ ಕಾಣಿಕೆಯನ್ನು ಕೊಡಲಿ. ಅವರಿಂದ ಕರ್ನಾಟಕ ಮತ್ತು ಭಾರತ ಸರ್ಕಾರದ ಅಡಿಯಲ್ಲಿ ಅಲೈಡ್ ಹೆಲ್ತ್‌ಸೈನ್ಸ್ ಶಾಖೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ದೊರೆಯಲಿ, ಇದರಿಂದ ಅವರುಗಳ ಜೀವನಮಾರ್ಗಕ್ಕೆ ಸಹಾಯವಾಗಲಿ ಎಂದು ನಾನು ಹಾರೈಸುತ್ತೇನೆ.

▪ ನಿರೂಪಣೆ: ಶ್ರೀವತ್ಸ

▪ ಮಾಹಿತಿ ಸಂಗ್ರಹ: ಶೃತಿ ಬೆಳ್ಳಿಯಾರ್ ಎಚ್.ವಿ.




ಡಾ. ರೇಖಾ ಗುರುಮೂರ್ತಿ, ಡಾ. ಕೃಷ್ಣ ಎಂ.ಸಿ. ಡಾ. ನಾಗರಾಜ ಸುರ್ಯದೇವರ, ಡಾ. ವಿನಿಭಾ ಇಲ್ಲಾಂಕೋವನ್ ಡಾ. ಪವಿತ್ರಾ ವಿ. ಡಾ. ಚಂದ್ರಪ್ಪ ಸಿ.ಪಿ. ಡಾ. ಚಂದ್ರಶೇಖರ್ ಎನ್. ಮಿ. ರಾಜಕುಮಾರ್ ಎಸ್.

# ನೀತಿ ಆಯೋಗಕ್ಕೆ ಇಬ್ಬರು ಪ್ರತಿಭಾವಂತ ಕನ್ನಡಿಗರ ನಾಮನಿರ್ದೇಶನ



ಡಾ. ಎಂ.ಶ್ರೀನಿವಾಸ



ಡಾ. ಕೆ.ವಿ.ರಾಜು

ನವದೆಹಲಿ ಏಮ್ಸ್‌ನ (ಅಖಿಲ ಭಾರತ ವೈದ್ಯ ಸಂಸ್ಥೆ) ಅಧ್ಯಕ್ಷರೂ, ಯಾದಗಿರಿ ಜಿಲ್ಲೆಯವರಾದ ಡಾ.ಎಂ.ಶ್ರೀನಿವಾಸ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ ಕಳೆದ ಒಂಬತ್ತು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಕೆ.ವಿ.ರಾಜು ಅವರುಗಳನ್ನು ಪ್ರಧಾನಮಂತ್ರಿ ನೇತ್ರತ್ವದ ನೀತಿ ಆಯೋಗದ ನೂತನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಡಾ.ಎಂ.ಶ್ರೀನಿವಾಸ ಅವರು ತಮ್ಮ ವೈದ್ಯಕೀಯ ಶಿಕ್ಷಣವನ್ನು ಕರ್ನಾಟಕದಲ್ಲಿ ಪಡೆದು ಕೋವಿಡ್ ಸಂದರ್ಭದಲ್ಲಿ ಅನುಪಮ ಸೇವೆ ಸಲ್ಲಿಸಿ ರಾಷ್ಟ್ರ ಆಡಳಿತಗಾರರ ಮೆಚ್ಚುಗೆ ಪಾತ್ರರಾಗಿದ್ದರು.

ಡಾ.ಕೆ.ವಿ.ರಾಜು ಅವರು 2008ರಿಂದ 2013ರವರೆಗೆ ಕರ್ನಾಟಕ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಈ ಇಬ್ಬರನ್ನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಪತ್ರ ಬರೆದು ಅಭಿನಂದಿಸಿದ್ದಾರೆ.

# ವೈದ್ಯರಿಗೆ ಕಲಿಕೆಯ ಹಸಿವು ತೀವ್ರವಾಗಿರಬೇಕು

'ವೈದ್ಯಕೀಯ ವೃತ್ತಿಯಲ್ಲಿ ಪರಿಪೂರ್ಣತೆ ಸಾಧಿಸಬೇಕಾದರೆ ಹೊಸದನ್ನು ಕಲಿಯುವ ಹಸಿವು ಸದಾ ತೀವ್ರವಾಗಿರಬೇಕು. ಆಗ ಮಾತ್ರ ಗುರಿಯನ್ನು ಸಾಧಿಸಿ ಯಶಸ್ಸನ್ನು ಕಾಣಬಹುದು' ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಅಭಿಪ್ರಾಯಪಟ್ಟರು. ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ಏಪ್ರಿಲ್ 7ರಂದು ಮೊದಲ ವರ್ಷದ ಪಿ.ಜಿ. ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಅವರು ಈ ವಿಷಯವನ್ನು ತಿಳಿಸಿದರು.



ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಮೊದಲನೇ ವರ್ಷದ ಪಿ.ಜಿ. ಓರಿಯಂಟೇಶನ್ ಕಾರ್ಯಕ್ರಮ.

"ಪ್ರತಿಯೊಬ್ಬ ರೋಗಿಯ ನೋವಿನಸಮಸ್ಯೆ, ಯಾತನೆ, ತೊಳಲಾಟ ಬೇರೆ ಬೇರೆಯಾಗಿರುತ್ತದೆ. ಹೀಗಾಗಿ ಕಲಿಕೆ ಎಂಬುದು ನಿರಂತರವಾಗಿರಬೇಕು. ವೃತ್ತಿಯಲ್ಲಿ ನೈಪುಣ್ಯವನ್ನು ಗಳಿಸಬೇಕಾದರೆ ಹೆಚ್ಚು ಹೆಚ್ಚು ಅನುಭವವನ್ನು ಪಡೆಯಬೇಕು. ಎಲ್ಲಾ ಸಂದರ್ಭಗಳಲ್ಲಿಯೂ ಒಂದೇ ಮಾನದಂಡ, ಒಂದೇ ಚಿಕಿತ್ಸೆ, ಒಂದೇ ನೋಟ ಎನ್ನುವುದು ಸರಿಯಾಗದು. ಆದ್ದರಿಂದ ಪ್ರತಿನಿತ್ಯ ಹೊಸದನ್ನು ಕಲಿಯುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ನೀವು ಶಿಕ್ಷಕರಾಗಬಹುದು ಇಲ್ಲವೆ ಸಲಹೆಗಾರರಾಗಬಹುದು. ಆದರೆ ನಿಮಗೆ ಹೊಸ ಅನುಭವ, ಹೊಸಚಿಂತನೆ ಮುಖ್ಯ" ಎಂದು ಡಾ.ಹುಲಿನಾಯ್ಕರ್ ಅವರು ವೈದ್ಯಕೀಯಕೋರ್ಸ್‌ನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಿಳಿಸಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ. ರಮಣ್ ಎಂ. ಹುಲಿನಾಯ್ಕರ್ ಮಾತನಾಡಿ, "ವೈದ್ಯಕೀಯ ವೃತ್ತಿಯಲ್ಲಿ ರೋಗಿಗಳಿಂದಲೂ, ಶುಶ್ರೂಷಕರಿಂದಲೂ ಕಲಿಯುವುದು ಬಹಳವಿರುತ್ತದೆ. ಒಟ್ಟಾರೆ ಇದೊಂದು ತಂಡದ ಕೆಲಸವಾಗಿರುತ್ತದೆ. ಉತ್ತಮ ವೈದ್ಯರಾಗುವುದಕ್ಕೆ ಶ್ರೀದೇವಿ ವಿದ್ಯಾಸಂಸ್ಥೆ ನೀಡಿರುವ ಕೊಡುಗೆಯನ್ನು ಮರೆಯಬೇಡಿ. ವೃತ್ತಿಯ ನೈತಿಕ ಮೌಲ್ಯವನ್ನು ಕಾಪಾಡಿಕೊಳ್ಳಬೇಕು ಮತ್ತು. ಮಾನವೀಯ ಸೇವೆ ನಿಮ್ಮ ಬದುಕಿನ ಗುರಿಯಾಗಬೇಕು" ಎಂದರು.

■ ವರದಿ: ಕೆ.ಎಸ್. ರಾಜಮನ್ನಾರ್



ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆ

# ನರ್ಸಿಂಗ್ ಶಿಕ್ಷಣದ ಮೇಲೆ ಸಮುದಾಯದ ಹೆಲ್ತ್‌ಕೇರ್ ಭವಿಷ್ಯ

"ನರ್ಸಿಂಗ್ ಶಿಕ್ಷಣದ ಮೇಲೆ ಸಮುದಾಯದ, ಆರೋಗ್ಯವಲಯದ ಭವಿಷ್ಯ ನಿಂತಿದೆ. ರೋಗಿಗಳ ಜೊತೆ, ರೋಗಿಗಳ ಕುಟುಂಬದ ಜೊತೆಗೆ ಉತ್ತಮ ಸಂಪರ್ಕ ಹೊಂದಬೇಕು. ಕಾಯಿಲೆಯು ಬಂದ ಮೇಲೆ ಚಿಕಿತ್ಸೆಯನ್ನು ಕೊಟ್ಟು ಗುಣಪಡಿಸುವುದಕ್ಕಿಂತ ಕಾಯಿಲೆಯೇ ಬಾರದಂತೆ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ, ಜಾಗೃತಿಗಳನ್ನು ಮೂಡಿಸುವುದು ಮುಖ್ಯವಾಗಿರುತ್ತದೆ. ಶುಶ್ರೂಷಕರ ಕೆಲಸಕ್ಕೆ ಮಿತಿ ಎಂಬುದೇ ಇಲ್ಲ. ಅವರಿಲ್ಲದೆ ಆರೋಗ್ಯಸೇವೆಯು ಎಂದಿಗೂ ಪೂರ್ಣವಾಗುವುದಿಲ್ಲ ಎಂದರೆ ಅವರ ಮಹತ್ತ್ವ ಮತ್ತು ಅವರ ಸೇವೆಯ ಮೌಲ್ಯ ಎಷ್ಟಿದೆ ಎಂಬುದನ್ನು ಅರ್ಥವಾಗುತ್ತದೆ" ಎಂದು ಸಿದ್ಧಾರ್ಥ ಉನ್ನತ ಶಿಕ್ಷಣ ಅಕಾಡೆಮಿ ಕುಲಪತಿ ಡಾ. ಕೆ. ಬಿ. ಲಿಂಗೇಗೌಡ ಅಭಿಪ್ರಾಯಪಟ್ಟಿದ್ದಾರೆ. ಶ್ರೀದೇವಿ ನರ್ಸಿಂಗ್ ಕಾಲೇಜು ಏಪ್ರಿಲ್ 9ರಂದು ಗುರುವಾರ ಆಯೋಜಿಸಿದ್ದ 'ವಿಶ್ವ ಆರೋಗ್ಯ ದಿನಾಚರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ಮಾತನಾಡಿ, "ಆರೋಗ್ಯವಲಯದಲ್ಲಿ ಹೊಸಹೊಸ ತಂತ್ರಜ್ಞಾನ ಬರುತ್ತಿದ್ದು ಅದನ್ನು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ. ಕೋವಿಡ್ ಸಂದರ್ಭದಲ್ಲಿ ನರ್ಸ್‌ಗಳು ವಹಿಸಿದ ಪಾತ್ರ ಮರೆಯಲಾಗದು. ಅವರಿಂದಾಗಿ ಲಕ್ಷಾಂತರ ಜೀವ ಉಳಿಸಲು ಸಾಧ್ಯವಾಯಿತು" ಎಂದರು. ನೇತ್ರತಜ್ಞೆ ಡಾ. ಲಾವಣ್ಯ, ನಿರ್ದೇಶಕರಾದ ಎಂ. ಎಸ್ ಪಾಟೀಲ್, ಪ್ರಾಂಶುಪಾಲ ಪ್ರೊ. ಆರ್. ಕೆ ಮುನಿಸ್ವಾಮಿ, ಪ್ರೊ.ರೇವಣ್ಣ, ಡಾ. ಬಸವರಾಜು, ಡಾ. ಎಚ್.ವಿ. ಪ್ರಕಾಶ್, ಡಾ. ಭೀಮರಾಜ್ ಮತ್ತು ಡಾ. ಚಿಕ್ಕ ಹನುಮಂತಯ್ಯ ಭಾಗಿಯಾಗಿದ್ದರು.

■ ವರದಿ: ಎನ್. ಆನಂದ

# ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ಆಹಾರ ಸೇವನೆಯಲ್ಲಿನ ಕ್ರಮರಾಹಿತ್ಯ ಕುರಿತು ಜಾಗೃತಿ ಕಾರ್ಯಕ್ರಮ

ತುಮಕೂರಿನ ಶ್ರೀದೇವಿ ಕಾಲೇಜ್ ಆಫ್ ನರ್ಸಿಂಗ್ ವತಿಯಿಂದ "ಆಹಾರ ಸೇವನೆಯಲ್ಲಿನ ಕ್ರಮರಾಹಿತ್ಯ–ಜಾಗೃತಿ ಸಪ್ತಾಹ"ದ (Eating Disorders Awareness Week) ಅಂಗವಾಗಿ ಮಾರ್ಚ್ 10ರಂದು ಶ್ರೀದೇವಿ ಸಭಾಂಗಣದಲ್ಲಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.




ಕಾರ್ಯಕ್ರಮದಲ್ಲಿ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ, ಪೌಷ್ಠಿಕಾಂಶ ವಿಭಾಗದಲ್ಲಿ ಕ್ಲಿನಿಕಲ್ ಡಯಟೀಷಿಯನ್ ಡಾ.ಡಿ.ಎಂ.ನೇತ್ರಾವತಿ ಅವರು ಉಪನ್ಯಾಸ ನೀಡಿದರು. ಅವರು ತಮ್ಮ ಉಪನ್ಯಾಸದಲ್ಲಿ ಕಿಶೋರರು ಹಾಗೂ ಯುವವಯಸ್ಕರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಆಹಾರ ಸಂಬಂಧಿತ ಅಸ್ವಸ್ಥತೆಗಳಾದ ಉದ್ದೇಶಪೂರ್ವಕವಾಗಿ ಆಹಾರ ಸೇವನೆ ಕಡಿಮೆ ಮಾಡಿ ದೇಹವನ್ನು ಸಣ್ಣದಾಗಿಸಿಕೊಳ್ಳುವ ಪ್ರವೃತ್ತಿಯಿಂದ ಉಂಟಾಗುವ ಅಗ್ನಿಮಾಂದ್ಯ, ಕ್ಷುದ್ರೋಗ, ಹೊಟ್ಟೆ ಬಾಕತನ, ಮಣ್ಣು, ಸುಣ್ಣ, ಪೆನ್ಸಿಲ್, ರಬ್ಬರ್, ಪೇಪರ್ ಮುಂತಾದ ಪೌಷ್ಠಿಕಾಂಶವಲ್ಲದ ವಸ್ತುಗಳನ್ನು ಸೇವಿಸುವ ಪ್ರವೃತ್ತಿ ಅಂದರೆ ಆಹಾರವಲ್ಲದುದನ್ನು ತಿನ್ನುವುದು (Pica) ಹಾಗೂ ಇತರ ನಿರ್ದಿಷ್ಟ ಆಹಾರಗಳ ಸೇವನೆಯಿಂದುಂಟಾದ ಅಸ್ವಸ್ಥತೆ (other specified feeding or eating disorder – OSFED) ಇವುಗಳನ್ನು ಕುರಿತು ವಿವರವಾಗಿ ತಿಳಿಸಿದರು. ಇಂತಹ ಕ್ರಮರಹಿತ, ಅವೈಜ್ಞಾನಿಕ ಆಹಾರಸೇವನೆಗಳು ದೇಹ ಮತ್ತು ಮಾನಸಿಕ ಆರೋಗ್ಯಗಳ ಮೇಲೂ ಗಂಭೀರ ಪರಿಣಾಮ ಬೀರುತ್ತವೆ. ವಿಶೇಷವಾಗಿ ಆತಂಕ (anxiety), ಮಾನಸಿಕ ಖಿನ್ನತೆ (depression) ಮುಂತಾದ ಮಾನಸಿಕ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚಿರುತ್ತವೆ. ಈ ಸಮಸ್ಯೆಗಳ ನಿವಾರಣೆಯ ನಿಟ್ಟಿನಲ್ಲಿ ಇಂತಹ ಅಭ್ಯಾಸಗಳ ಹಿಂದಿರುವ ಮಾನಸಿಕ ಹಾಗೂ ಸಾಮಾಜಿಕ ಕಾರಣಗಳನ್ನು ಹಾಗೂ ಆರಂಭಿಕ ಲಕ್ಷಣ ಮತ್ತು ಗುರುತುಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ.

"ಇವುಗಳನ್ನು ತಡೆಗಟ್ಟಲು ಆರೋಗ್ಯಕರ ಆಹಾರ ಪದ್ಧತಿ ಅನುಸರಿಸುವುದು, ಸಮತೋಲನ ಪೌಷ್ಠಿಕಾಂಶದ ಆಹಾರಸೇವನೆ, ನಿಯಮಿತ ವ್ಯಾಯಾಮ ಮತ್ತು ಪೌಷ್ಠಿಕ ಆಹಾರಗಳ ವಿಷಯದಲ್ಲಿ ಸಲಹೆಗಳನ್ನು ಪಡೆಯುವುದು ಅಗತ್ಯ. ಸಮಸ್ಯೆ ಕಾಣಿಸಿಕೊಂಡ ತಕ್ಷಣ ತಜ್ಞರ ಸಲಹೆ ಪಡೆಯುವುದರಿಂದ ಈ ಅನಾರೋಗ್ಯ ಚಟಗಳಿಂದ ಹೊರಬರಲು ಸಾಧ್ಯವಾಗುತ್ತದೆ. ಇವುಗಳನ್ನು ತಡೆಗಟ್ಟಲು ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳು ಮುಖ್ಯ" ಎಂದರು. ಈ ಕಾರ್ಯಕ್ರಮದ ಪ್ರೇಕ್ಷಕರು ನರ್ಸಿಂಗ್ ವಿದ್ಯಾರ್ಥಿಗಳಾಗಿದ್ದು, ಇಂತಹ ಸಮಸ್ಯೆಗಳು ಈ ವಯಸ್ಸಿನವರಲ್ಲಿ ಹೆಚ್ಚು ಕಂಡು ಬರುವುದರಿಂದ ಅವರಿಗೆ ಇದರ ಹಾನಿಗಳನ್ನು ಕುರಿತು ಜಾಗೃತಿಯನ್ನು ಮೂಡಿಸಲಾಯಿತು. ಜೊತೆಗೆ ಸಮಾಜದಲ್ಲೂ ಈ ಕುರಿತು ಅರಿವು ಮೂಡಿಸಿ ಇಂತಹ ಘಟನೆಗಳ ಪ್ರಮಾಣವನ್ನು ಕಡಿಮೆ ಮಾಡುವ ಸಂದೇಶವನ್ನು ಹಂಚಿಕೊಳ್ಳುವಂತೆ ಅವರಿಗೆ ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ. ಆರ್.ಕೆ. ಮುನಿಸ್ವಾಮಿ, ಡಾ. ಭೀಮರಾಜು, ಡಾ.ಚಿಕ್ಕಹನುಮಂತಯ್ಯ, ಡಾ.ಪ್ರಕಾಶ್, ಡಾ.ಸುಮ, ಡಾ.ವಿದ್ಯಾಶ್ರೀ ಸಹಾಯಕ ಪ್ರಾಧ್ಯಾಪಕರಾದ ಪ್ರೊ. ನಾಗವೇಣಿ, ಮತ್ತು ಉಪನ್ಯಾಸಕಿಯರಾದ ಬೆನ್ಸಿ, ಹರ್ಷಣಿ, ರಾಧಿಕಾ ಹಾಗೂ 5ನೇ ಸೆಮಿಸ್ಟರ್‌ನ Bsc ನರ್ಸಿಂಗ್ ವಿದ್ಯಾರ್ಥಿಗಳು, 2ನೇ GNM (General Nursing and Midwifery) ನರ್ಸಿಂಗ್ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 350 ಜನ ಶೋತೃಗಳು ಭಾಗವಹಿಸಿದ್ದರು.

■ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ

# ಡಾ. ಶ್ರೀಶಿವಕುಮಾರ ಸ್ವಾಮೀಜಿವರ 119ನೇ ಜನ್ಮದಿನೋತ್ಸವದಲ್ಲಿ ಭಕ್ತಿ ಸಮರ್ಪಣೆ

'ನಡೆದಾಡುವ ದೇವರು' ಎಂದು ಖ್ಯಾತರಾಗಿದ್ದ ತುಮಕೂರಿನ ಸಿದ್ಧಗಂಗಾಮಠದ ಪೀಠಾಧ್ಯಕ್ಷರಾಗಿದ್ದ ಪೂಜ್ಯ ಡಾ.ಶ್ರೀ ಶಿವಕುಮಾರಸ್ವಾಮೀಜಿ ಅವರು ಬಡವ, ಬಲ್ಲಿದ ಎನ್ನುವುದನ್ನು ನೋಡದೆ, ಜಾತಿಯನ್ನು ಪರಿಗಣಿಸದೆ ಎಲ್ಲಾ ಮಕ್ಕಳಿಗೂ ಅನ್ನ, ವಸತಿ ಕೊಟ್ಟು ಎಲ್ಲರೂ ನಮ್ಮವರೇ ಎಂದವರನ್ನು ಪೋಷಿಸಿ, ಅವರ ವಿದ್ಯಾಭ್ಯಾಸಕ್ಕೆ ಅತಿ ಹೆಚ್ಚು ಗಮನವನ್ನು ಕೊಟ್ಟು ಅವರುಗಳು ಉನ್ನತಸ್ಥಾನಗಳನ್ನು ಪಡೆಯುವಂತೆ ಮಾಡಿದ್ದರು. 'ಕಾಯಕವೇ ಕೈಲಾಸ' ಎನ್ನುವ ಬಸವತತ್ತ್ವವನ್ನು ಪರಿಪೂರ್ಣವಾಗಿ ಪಾಲಿಸಿದ ಶ್ರೀಗಳು ಎಲ್ಲರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು" ಎಂದು ಏಪ್ರಿಲ್ 1 ರಂದು ಶ್ರೀಗಳ 119ನೆಯ ಜನ್ಮದಿನೋತ್ಸವದ ಅಂಗವಾಗಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶ್ರೀದೇವಿ ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್ ಅವರು ತಿಳಿಸಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಸಮಾಜದ ಕೆಳಸ್ತರಗಳಿಂದ ಬಂದ ಅಶಕ್ತರು, ದೀನರು, ದುರ್ಬಲರಿಗೆ ತ್ರಿವಿಧ ದಾಸೋಹಿಗಳಾದ ಪರಮಪೂಜ್ಯ ಡಾ. ಶ್ರೀಶ್ರೀ ಶಿವಕುಮಾರಸ್ವಾಮಿ ಅವರು ಅನ್ನ, ಆಶ್ರಯ ಮತ್ತು ವಿದ್ಯೆಯನ್ನು ನೀಡಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಸೇವೆಯನ್ನು ನಿರಂತರವಾಗಿ ಮಾಡುತ್ತಿದ್ದರು" ಎಂದರು.



ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ವೈದ್ಯಕೀಯ ಆಡಳಿತ ವಿಭಾಗದ ಉಪಪ್ರಾಂಶುಪಾಲರಾದ ಡಾ.ಎಂ.ಎನ್.ಹೇಮಂತ್‌ರಾಜ್, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಡಾ.ಪ್ರದೀಪ್‌ಕುಮಾರ್ ವೆಗ್ಗಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಉಪಅಧೀಕ್ಷಕರಾದ ಡಾ.ಚೆನ್ನಮಲ್ಲಯ್ಯ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಡೀನ್ ಅಕಾಡೆಮಿಕ್ಸ್ ಹಾಗೂ ಉಪಪ್ರಾಂಶುಪಾಲರಾದ ಡಾ.ಎನ್.ಚಂದ್ರಶೇಖರ್ ಅವರುಗಳು ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿದರು.

# ದೈಹಿಕ ಶಿಕ್ಷಣವೆಂಬುದು ಸಕಾರಾತ್ಮಕ ಶಕ್ತಿ

ಪರೀಕ್ಷೆಗಳು ಹತ್ತಿರವಾಗುತ್ತಿರುವ ಸಮಯದಲ್ಲಿ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಒತ್ತಡಗಳನ್ನು ಕಡಮೆ ಮಾಡುವ ಉದ್ದೇಶದಿಂದ ತುಮಕೂರಿನ ಶ್ರೀದೇವಿ ಪಿಯುಸಿ ಕಾಲೇಜಿನಲ್ಲಿ ಜಿಲ್ಲೆಯ ದೈಹಿಕ ಶಿಕ್ಷಕರಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿತ್ತು.

ಶಿಕ್ಷಣ ಎಂದರೆ ಕೇವಲ ತರಗತಿಯಲ್ಲಿ ಕುಳಿತು ಪಾಠ ಕೇಳುವುದು, ಪರೀಕ್ಷೆ ಬರೆಯುವುದು, ಅಂಕ ಗಳಿಸುವುದಷ್ಟೇ ಅಲ್ಲ. ಅದರ ಜೊತೆಗೆ ಸದೃಢ ದೇಹ, ಸದೃಢ ಮನಸ್ಸನ್ನು ಗಳಿಸಿಕೊಳ್ಳಬೇಕು. ಅದಕ್ಕೆ ದೈಹಿಕ ಶಿಕ್ಷಣ ಬಹಳ ಅವಶ್ಯಕ. ವೈದ್ಯರು ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯವನ್ನು ಮಾಡಿದರೆ, ದೈಹಿಕ ಶಿಕ್ಷಕರು ಸಮಾಜದ ಆರೋಗ್ಯಕ್ಕೆ ಕಾರಣರಾಗುತ್ತಾರೆ. ದೇಹ ದಂಡಿಸುವವನು ದೇವರನ್ನು ಕಾಣುತ್ತಾನೆ. ದೇವರನ್ನು ಕಾಣುವವನು ಸದಾ ಆರೋಗ್ಯ ಮತ್ತು ಹಸನ್ಮುಖಿಯಾಗಿರುತ್ತಾನೆ ಎಂದು ಈ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು ಹೇಳಿದ ಮಾತು ಬಹಳ ಸೂಕ್ತವಾಗಿತ್ತು.

ನಿವೃತ್ತ ಪೊಲೀಸ್ ಅಧಿಕಾರಿ ಕೆ.ನಾರಾಯಣಸ್ವಾಮಿಯವರ ಪ್ರಕಾರ "ಯಾವುದೇ ವಿದ್ಯಾ ಸಂಸ್ಥೆಯಲ್ಲಿ ಶಿಸ್ತು ಜಾರಿಯಲ್ಲಿದೆ ಎಂದರೆ ಅದರ ಪ್ರೇರೇಕ ಶಕ್ತಿ ದೈಹಿಕ ಶಿಕ್ಷಕರೇ ಆಗಿರುತ್ತಾರೆ. ತುಮಕೂರು ವಿದ್ಯಾಕಾಶಿಯಾಗಿ ಬೆಳೆದಿದೆ. ಇಲ್ಲಿ ಶಿಕ್ಷಣ ಪಡೆದ ಅನೇಕ ಮಹನೀಯರು ವಿಶ್ವದ 200 ದೇಶಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದರೆ ಶೈಕ್ಷಣಿಕ ವಲಯದಲ್ಲಿ ಈ ಜಿಲ್ಲೆ ಸಾಧಿಸಿರುವ ಪ್ರಗತಿಯ ಮಟ್ಟ ಅರ್ಥವಾಗುತ್ತದೆ."



ಶ್ರೀದೇವಿ ಪಿ.ಯು. ಕಾಲೇಜಿನ ವತಿಯಿಂದ ಒಂದು ದಿನದ "ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರ".

ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಎಂ. ಹುಲಿನಾಯ್ಕರ್ ಅವರು ದೈಹಿಕ ಚಟುವಟಿಕೆಗಳ ಕೊರತೆಯಿಂದಾಗಿ ಮತ್ತು ಜೀವನಶೈಲಿಯ ಕಾರಣದಿಂದ ಕಾಯಿಲೆಗಳು ಹೆಚ್ಚಾಗುತ್ತಿವೆ. ಭಾರತ ಡಯಾಬಿಟಿಸ್ ರೋಗದ ರಾಜಧಾನಿಯಾಗಿ ಪರಿವರ್ತನೆಯಾಗಿದೆ. ಪ್ರತಿಯೊಂದು ಶೈಕ್ಷಣಿಕಸಂಸ್ಥೆಗಳು ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ದೈಹಿಕಶಿಕ್ಷಕರಿಗೆ ಮತ್ತು ಅವರ ಮಕ್ಕಳಿಗಾಗಿ ಶ್ರೀದೇವಿ ಆಸ್ಪತ್ರೆಯಿಂದ ಉಚಿತ ಆರೋಗ್ಯ ಶಿಬಿರ ನಡೆಸಲಾಗುವುದು ಮತ್ತು ರಿಯಾಯಿತಿ ದರದಲ್ಲಿ ಚಿಕಿತ್ಸೆ, ಔಷಧಿ ನೀಡುವ ಹೆಲ್ತ್‌ಕಾರ್ಡ್ ಯೋಜನೆ ಜಾರಿಗೊಳಿಸುವ ಭರವಸೆಯನ್ನು ನೀಡಿದರು.

**ಟಿ. ಆರ್. ಬಸವರಾಜು ಅವರ ಅಭಿಪ್ರಾಯ:**

"ಪರೀಕ್ಷೆಗಳು ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಹುರುಪಿನ ವಾತಾವರಣ ಬರಬೇಕು. ಕಳೆದ 2014ರಿಂದ ದೈಹಿಕ ಶಿಕ್ಷಕರ ನೇಮಕಾತಿ ನಡೆದಿಲ್ಲ. ಮತ್ತು ಆರುಸಾವಿರಕ್ಕೂ ಹೆಚ್ಚು ಪಿಯುಸಿ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರಿಲ್ಲ. ಈ ಕೊರತೆಯನ್ನು ತುಂಬಬೇಕು. ಪಾಠದಷ್ಟೇ ದೈಹಿಕ ಶಿಕ್ಷಣವೂ ಮುಖ್ಯ" – ಇದು ರಾಜ್ಯ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಟಿ. ಆರ್. ಬಸವರಾಜು ಅವರ ಅಭಿಪ್ರಾಯ

ಕ್ರೀಡಾರತ್ನ ಪ್ರಶಸ್ತಿ ವಿಜೇತೆ ಎಚ್. ಎಂ.ಮೇಘನಾ, ತುಮಕೂರು ಜಿಲ್ಲೆಯ ದೈಹಿಕ ಶಿಕ್ಷಕರ ಸಂಘದ ಪದಾಧಿಕಾರಿಗಳು ಈ ಕಾರ್ಯಾಗಾರದಲ್ಲಿ ಹಾಜರಿದ್ದರು.

▪ ವರದಿ: ಕೆ.ಎಸ್. ರಾಜಮನ್ನಾರ್

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ**

# ಸ್ತನಕ್ಯಾನ್ಸರ್ ಹಾಗೂ ಹೆಚ್.ಪಿ.ವಿ. ಲಸಿಕೆ ಕುರಿತಾದ ಜಾಗೃತಿ



ಡಾ. ನಳಿನಿ




ಡಾ. ದಯಾನಂದ್



ಡಾ. ಸುಕೃತಿ

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಮಾರ್ಚ್11 ರಂದು ಆಸ್ಪತ್ರೆಯ ಆಡಿಯಟೋರಿಯಂನಲ್ಲಿ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ' ಅಂಗವಾಗಿ ಮಹಿಳೆಯರ ಆರೋಗ್ಯಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅದರಲ್ಲಿ ಡಾ.ದಯಾನಂದ್ 'ಕ್ಯಾನ್ಸರ್ ಸ್ಕ್ರೀನಿಂಗ್', ಡಾ. ನಳಿನಿ 'HPV ಲಸಿಕೆ' ಮತ್ತು ಡಾ.ಸುಕೃತಿ 'ಚರ್ಮದ ಆರೈಕೆ'ಗಳನ್ನು ಕುರಿತು ಮಹತ್ವದ ಮಾಹಿತಿಯನ್ನು ಹಂಚಿಕೊಂಡರು.

"ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಕ್ಯಾನ್ಸರ್‌ಗಳಲ್ಲಿ ಸ್ತನಕ್ಯಾನ್ಸರ್ ಪ್ರಮುಖವಾಗಿದ್ದು, ಇದರ ಕುರಿತು ಜಾಗೃತಿ ಅತ್ಯಂತ ಅಗತ್ಯವಾಗಿದೆ. ಅಂದಾಜು ಒಂದು ಲಕ್ಷ ಮಹಿಳೆಯರಲ್ಲಿ ಸುಮಾರು 25ರಿಂದ 30 ಮಂದಿಗೆ ಸ್ತನಕ್ಯಾನ್ಸರ್ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಈ ಕಾಯಿಲೆ ಸರಾಸರಿ 52ನೆಯ ವಯಸ್ಸಿನಲ್ಲಿ ಪತ್ತೆಯಾಗುತ್ತದೆ.. ಭಾರತದಲ್ಲಿ ಬಹುತೇಕ ಪ್ರಕರಣಗಳು ತಡವಾಗಿ ಪತ್ತೆಯಾಗುವ ಸಮಯಕ್ಕಾಗಲೇ ಅದು ಮೂರನೆಯ ಅಥವಾ ನಾಲ್ಕನೆಯ ಹಂತಗಳನ್ನು ತಲುಪಿರುವುದು ಆತಂಕಕಾರಿ ಸಂಗತಿಯಾಗಿದೆ. ಆದರೆ ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿದರೆ ಈ ಕ್ಯಾನ್ಸರನ್ನು ಶೇಕಡಾ 100ರಷ್ಟು ಗುಣಪಡಿಸುವ ಸಾಧ್ಯತೆ ಇದೆ" ಎಂದು ಕ್ಯಾನ್ಸರ್ ಶಸ್ತ್ರಚಿಕಿತ್ಸಕರಾಗಿರುವ ಡಾ. ದಯಾನಂದ್ ತಿಳಿಸಿದರು. ನಂತರ ಅವರು "ಸ್ತನಕ್ಯಾನ್ಸರ್‌ನ ಪ್ರಮುಖ ಲಕ್ಷಣಗಳೆಂದರೆ ಸ್ತನದಲ್ಲಿ ಅಥವಾ ಅದರ ಸುತ್ತಮುತ್ತ ಹಾಗೂ ಕಂಕುಳ ಭಾಗದಲ್ಲಿ ಗೆಡ್ಡೆಗಳು ಕಂಡು ಬರುತ್ತವೆ. ಈ ಗಡ್ಡೆಗಳು ಗಾತ್ರ ಅಥವಾ ಆಕಾರದಲ್ಲಿ ಬೇರೆ, ಬೇರೆಯಾಗಿರುತ್ತವೆ. ಈ ಲಕ್ಷಣಗಳನ್ನು ಬೇಗ ಪತ್ತೆ ಹಚ್ಚಲು ಮಹಿಳೆಯರು ಪ್ರತಿ ತಿಂಗಳು ಋತುಚಕ್ರದ ನಂತರ ಸ್ವಯಂ ಸ್ತನಪರೀಕ್ಷೆ (Self Breast Examination) ಮಾಡಿಕೊಳ್ಳುವುದು ಅಗತ್ಯ" ಎಂಬ ಸಲಹೆಯನ್ನು ನೀಡಿದರು.

ಇದೇ ವೇಳೆ, ಗರ್ಭಾಶಯ ಕಂಠದ ಕ್ಯಾನ್ಸರ್ ತಡೆಗೆ ಮಾನವ ಪ್ಯಾಪಿಲೋಮಾ ವೈರಸ್ (HPV) ಲಸಿಕೆಯ ಮಹತ್ವದ ಬಗ್ಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ನಳಿನಿ ಅವರು "HPV ಒಂದು ಸಾಮಾನ್ಯ ವೈರಸ್ ಆಗಿದ್ದು, ಚರ್ಮದಿಂದ ಚರ್ಮಕ್ಕೆ ಸಂಪರ್ಕದ ಮೂಲಕ ಹರಡುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಪೂರ್ವ ಲಕ್ಷಣಗಳಿಲ್ಲದೆ ಕಾಣಿಸಿಕೊಳ್ಳುವ ಈ ಸೋಂಕು, ಕೆಲವೊಮ್ಮೆ ಗರ್ಭಾಶಯ ಮುಖದ ಕ್ಯಾನ್ಸರ್ ಸೇರಿದಂತೆ ಇತರ ಕ್ಯಾನ್ಸರ್‌ಗಳಿಗೆ ಕಾರಣವಾಗಬಹುದು. 9ರಿಂದ 14 ವರ್ಷದೊಳಗಿನ ಮಕ್ಕಳಿಗೆ HPV ಲಸಿಕೆ ನೀಡುವುದರಿಂದ ವೈರಸ್ ಸಂಪರ್ಕಕ್ಕೂ ಮುನ್ನವೇ ಶಕ್ತಿಯುತ ರಕ್ಷಣೆಯನ್ನು ಅವರಿಗೆ ಒದಗಿಸಬಹುದು. ಈ ಲಸಿಕೆ ಸುರಕ್ಷಿತವಾಗಿದ್ದು ಪರಿಣಾಮಕಾರಿಯೂ ಆಗಿದ್ದು, ಕ್ಯಾನ್ಸರ್ ತಡೆಗೆ ಪ್ರಮುಖ ಕ್ರಮವಾಗಿದೆ. ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಜಾಗೃತರಾಗಿರುವುದು ಹಾಗೂ ಪೋಷಕರು ತಮ್ಮ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಕೊಡಿಸುವುದು ಅತ್ಯಂತ ಮುಖ್ಯವಾಗಿದೆ. ಮುಂಚಿತವಾಗಿ ತೆಗೆದುಕೊಳ್ಳುವ ಕ್ರಮಗಳ ಮೂಲಕ ಕ್ಯಾನ್ಸರ್‌ನ ಅಪಾಯವನ್ನು ಕಡಮೆ ಮಾಡಬಹುದು" ಎಂದರು.

ಚರ್ಮರೋಗ ತಜ್ಞರಾದ ಡಾ. ಸುಕೃತಿ ಅವರು ಮಹಿಳೆಯರಲ್ಲಿ ಆರೋಗ್ಯಕರ ಚರ್ಮವನ್ನು ಕಾಪಾಡಿಕೊಳ್ಳಲು ಸರಿಯಾದ ಆರೈಕೆ ಹಾಗೂ ಸಾಮಾನ್ಯ ಸಮಸ್ಯೆಗಳಿಗೂ ತಕ್ಷಣ ಚಿಕಿತ್ಸೆ ಪಡೆಯುವ ಮಹತ್ತ್ವವನ್ನು ವಿವರಿಸಿದರು. ಕೂದಲು ಉದುರುವುದು, ತೆಳ್ಳಗಾಗುವುದು ಸೇರಿದಂತೆ ಸಾಮಾನ್ಯ ಕೂದಲು ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದ ಅವರು, ಕೂದಲು ಮರು ಬೆಳವಣಿಗೆಗಾಗಿ ಬಳಸುವ ಆಧುನಿಕ ವಿಧಾನಗಳಾದ ಪಿಆರ್‌ಪಿ (PRP) ಮತ್ತು ಜಿಎಫ್‌ಸಿ (GFC) ಚಿಕಿತ್ಸೆಗಳ ವಿವರಗಳನ್ನು ತಿಳಿಸಿದರು. ಆಧುನಿಕ ಸೌಂದರ್ಯ ಚಿಕಿತ್ಸೆಗಳಾದ ಲೇಸರ್ ಟೋನಿಂಗ್, ಗಾಯದ ಗುರುತುಗಳ ನಿವಾರಣೆಗೆ ಫ್ರಾಕ್ಷನಲ್ ಕಾರ್ಬನ್ ಡೈಯಾಕ್ಸೈಡ್ ಲೇಸರ್, ಕೆಮಿಕಲ್ ಪೀಲ್ಸ್ ಹಾಗೂ ಲೇಸರ್ ಹೇರ್‌ರಿಡಕ್ಷನ್ ಬಗ್ಗೆಗೂ ಮಾಹಿತಿಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಟ್ರಸ್ಟಿ ಹಾಗೂ ನೇತ್ರತಜ್ಞೆ ಡಾ.ಲಾವಣ್ಯ ರಮಣ್‌ಅವರು ಮಾತನಾಡುತ್ತಾ "ಮಹಿಳೆಯರು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನವನ್ನು ಕೊಡಬೇಕು. ಹೆಚ್ಚು ಪ್ರೊಟೀನ್ ಅಂಶವುಳ್ಳ ತರಕಾರಿ, ಮೊಳಕೆಕಾಳುಗಳು. ಮೊಟ್ಟೆ ಇವನ್ನು ಹೆಚ್ಚು ಸೇವಿಸಬೇಕು. ಜೊತೆಗೆ ಪ್ರತಿನಿತ್ಯ ವ್ಯಾಯಾಮ ಮಾಡಬೇಕು. ಏಕೆಂದರೆ ಮಹಿಳೆಯರು ಕೆಲಸದ ನಿಮಿತ್ತ ಊಟ, ಆರೋಗ್ಯದ ಕಡೆ ಗಮನ ಹರಿಸುವುದಿಲ್ಲ. ಹಾಗಾಗಿ ಇನ್ನು ಮುಂದೆ ಪ್ರತಿದಿನ ಒಂದು ಗಂಟೆಯಾದರೂ ನಿಮಗಾಗಿ ಮೀಸಲು ಇಟ್ಟುಕೊಳ್ಳಿ' ಎಂದರು. ಕೊನೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ಸನ್ಮಾನ ಮಾಡಲಾಯಿತು.

▪ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿಗೆ ಕೀರ್ತಿ ತಂದ ವಿನುತಾ



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 2026 ಸಾಲಿನ ಜನವರಿ–ಫೆಬ್ರವರಿಯಲ್ಲಿ ನಡೆಸಿದ ಪರೀಕ್ಷೆಯಲ್ಲಿ ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ವಿನುತಾ ಅಶೋಕ ಕುಳೇನವರ್ ಮೊದಲ ಸೆಮಿಸ್ಟರ್ ಪರೀಕ್ಷೆಯ ಎಲ್ಲ ವಿಷಯಗಳಲ್ಲಿ ಪೂರ್ಣ ಅಂಕ ಗಳಿಸಿ, ಪರೀಕ್ಷೆಯ ಎಸ್.ಜಿ.ಪಿ.ಎ (SGPA) 10ಕ್ಕೆ 10 ಅಂಕಗಳನ್ನು ಗಳಿಸಿ ಕಾಲೇಜಿಗೆ ಹೆಮ್ಮೆ, ಕೀರ್ತಿ, ಗೌರವತಂದಿದ್ದಾರೆ.


**ಹಳ್ಳಿಯ ಪ್ರತಿಭೆ**

ಇವರು ಧಾರವಾಡ ಜಿಲ್ಲೆಯ ಕಣವಿಹೊನ್ನಾಪುರ ಗ್ರಾಮದ ರೈತ ಕುಟುಂಬದಿಂದ ಬಂದವರು. ತಮ್ಮ ಅದ್ಭುತ ಶೈಕ್ಷಣಿಕ ಸಾಧನೆಯಿಂದ ತಂದೆ, ತಾಯಿಗಳಿಗೂ ಕೀರ್ತಿ, ಗೌರವಮತ್ತು ಸಂತೋಷವನ್ನು ತಂದಿದ್ದಾರೆ. ದಿನಾಂಕ 5.9.2007ರಲ್ಲಿ ಜನನ. ಅನಂತರ ಧಾರವಾಡದ ಪ್ರೆಸೆಂಟೇಶನ್ ಬಾಲಕಿಯರ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ. ಆ ಪರೀಕ್ಷೆಯಲ್ಲಿ 92.3 ಅಂಕ ಗಳಿಸಿ ಉತ್ತೀರ್ಣರಾಗಿದ್ದು ಅನಂತರ ಧಾರವಾಡ ಆರ್ಯಭಟ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪಿಯುಸಿ ವಿಜ್ಞಾನ ವಿಭಾಗದಲ್ಲಿ 86.3 ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದರು. ತಂದೆ ಅಶೋಕ್ ಕೃಷಿಕರು. ತಾಯಿ ಗೃಹಿಣಿ. ದೊಡ್ಡಣ್ಣ ಚಾಲಕ ವೃತ್ತಿಯಲ್ಲಿದ್ದಾರೆ. ಅಕ್ಕ ಶುಶ್ರೂಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿನುತಾ ಅನನ್ಯ ಸಾಧನೆ ಪದವಿ ಹಂತದಲ್ಲಿಯೂ ಮುಂದುವರಿದಿದೆ.

"ನನ್ನ ಇಂದಿನ ಸಾಧನೆಗೆ ಕಾಲೇಜು ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಅಧ್ಯಾಪಕರು ಮತ್ತು ಸಹಪಾಠಿಗಳು ಕಾರಣರಾಗಿದ್ದಾರೆ. ಅವರೆಲ್ಲರನ್ನು ಈ ಸಂದರ್ಭದಲ್ಲಿ ಗೌರವದಿಂದ ಸ್ಮರಿಸುತ್ತೇನೆ. ನನ್ನ ಗುರಿ ಸ್ಪಷ್ಟವಾಗಿದ್ದು ಉನ್ನತ ವ್ಯಾಸಂಗ ಮುಂದುವರಿಸುತ್ತೇನೆ" ಎಂದು ತಮ್ಮ ಮನದಾಳದ ಇಂಗಿತ ವ್ಯಕ್ತಪಡಿಸಿದ್ದಾರೆ. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ವಿನುತಾ ಅವರ ಸಾಧನೆ ಇತರ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ.

ಮೊದಲ ಸೆಮಿಸ್ಟರ್ ಪರೀಕ್ಷೆಯಲ್ಲಿ ಕಾಲೇಜಿನ 29 ವಿದ್ಯಾರ್ಥಿಗಳು ಎಸ್.ಜಿ.ಪಿ.ಎ.ಯಲ್ಲಿ (SGPA) 10ಕ್ಕೆ 9 ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ. ಇದರ ಜೊತೆಗೆ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು ಗಣಿತ ವಿಭಾಗದಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ.

## ನೆನಪಿನಲ್ಲಿಡಬೇಕಾದ ಮಾತು



"ಜಗತ್ತಿನಲ್ಲಿ ಪ್ರವಾದಿಗಳ, ಸಾಧುಗಳ, ಅವಧೂತರ ಜೀವನ ಕಾಲ, ಎಲ್ಲಾ ಸ್ಥಳಗಳಲ್ಲೂ ವಿಚಿತ್ರ ಹಾದಿಯನ್ನು ಹಿಡಿಯುತ್ತವೆ. ಅವರ ಉದಯವೋ ಮಿಂಚಿನಷ್ಟು ಅನಿರೀಕ್ಷಿತ, ಸದ್ದಿಲ್ಲದೆ ಬಂದು ಜಗತ್ತಿನ ಮೇಲೆ ಬೆಳಕನ್ನು ಬೀರಿ, ಕಣ್ಣಿವೆ ತೆರೆದು ಮುಚ್ಚುವುದರೊಳಗಾಗಿ ಮಾಯವಾಗುವುದು ಅವರ ಸ್ವಭಾವ. ಅವರನ್ನು ಕಾಣುವವರು ಕಡಿಮೆ, ಕಂಡು ತಿಳಿದುಕೊಳ್ಳುವವರು ಮತ್ತೂ ಕಡಿಮೆ. ತಿಳಿದ ಮೇಲೆ ಅನುಸರಿಸಿ ನಡೆಯುವವರು ಇನ್ನಷ್ಟು ಕಡಿಮೆ. ಇದು ಜಗತ್ತಿನ ವಿಧಾನ.

**ಡಾ.ಕೆ. ಶಿವರಾಮ ಕಾರಂತ**
(ಶ್ರೀ ರಾಮಕೃಷ್ಣರ ಜೀವನಚರಿತ್ರೆ ಗ್ರಂಥ. ಪು. 41)

# ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಿಂದ ವಾರ್ಷಿಕ 4ರಿಂದ 14 ಲಕ್ಷದವರಿಗೆ ವೇತನ

"ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಉದ್ಯೋಗಾವಕಾಶವನ್ನು ಪಡೆದಿರುವುದು. ನಮ್ಮ ಸಂಸ್ಥೆಗೆ ಹೆಮ್ಮೆ ತಂದಿದೆ. ಶ್ರೀದೇವಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದೇಶ–ವಿದೇಶಗಳ ಪ್ರತಿಷ್ಠಿತ ಕಂಪನಿಗಳಲ್ಲಿ ಉತ್ತಮ ಉದ್ಯೋಗ ದೊರಕಿಸಿ ಕೊಡುವುದು ನಮ್ಮ ಸಂಸ್ಥೆಯ ಮುಖ್ಯಗುರಿಯಾಗಿದೆ. ಉದ್ಯೋಗ ಪಡೆಯಲು ಅಗತ್ಯವಾದ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಉಜ್ವಲ ಭವಿಷ್ಯ ಮತ್ತಷ್ಟು ಉಜ್ವಲವಾಗಿರಲಿ. ಈ ಸಾಧನೆ ನಿಮ್ಮ ಜೀವನದಲ್ಲಿ ಒಳ್ಳೆಯ ಅನುಭವವಾಗಲಿದೆ" ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ತಿಳಿಸಿದರು.

ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏಪ್ರಿಲ್ 18ರಂದು ಪ್ರತಿಷ್ಠಿತ ಕಂಪನಿಗಳ ಸಹಯೋಗದೊಂದಿಗೆ ಉದ್ಯೋಗಾವಕಾಶ ಲಭಿಸಿದೆ. ವಿದ್ಯಾರ್ಥಿಗಳು ಭಾಗವಹಿಸಿ ಕಂಪನಿಗಳು ನೀಡಿದ ಎಲ್ಲಾ ಸುತ್ತಿನ ಸಂದರ್ಶನಗಳನ್ನು ಯಶಸ್ವಿಯಾಗಿ ಪೂರೈಸಿ ಉತ್ತಮ ವೇತನದೊಂದಿಗೆ ಪ್ರತಿಷ್ಠಿತ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ.



ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಿಂದ ವಾರ್ಷಿಕ 4 ಲಕ್ಷದಿಂದ 14 ಲಕ್ಷದವರಿಗೆ ವೇತನ. ಆಯ್ಕೆಯಾದ ವಿದ್ಯಾರ್ಥಿಗಳೊಂದಿಗೆ ಸಂಸ್ಥೆಯ ಅಧ್ಯಕ್ಷರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು "ಉತ್ತಮ ಕಂಪನಿಗಳಲ್ಲಿ ಕೆಲಸ ಪಡೆಯುವುದು ದೊಡ್ಡ ಸಾಧನೆ. ನಿಮ್ಮ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಹಾಗೂ ಸಂಸ್ಥೆಯ ಮೌಲ್ಯಗಳನ್ನು ಮುಂದುವರಿಸಿ" ಎಂದರು.

ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳಾದ Check point software Technologies, Deloitte, Cognizant, Clean Fanatics, Talking Lands, Tetris Innovation, Lyzr AI, Conduent, ಇತ್ಯಾದಿ 75ಕ್ಕೂ ಹೆಚ್ಚು ಕಂಪನಿಗಳು ಕಾಲೇಜಿನ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಗಳಿಗೆ ನೇಮಕಾತಿ ಮಾಡಿಕೊಂಡಿವೆ.

ಪ್ರಸ್ತುತ ವರ್ಷದಲ್ಲಿ ಕಾಲೇಜಿನ 200ಹೆಚ್ಚು ವಿದ್ಯಾರ್ಥಿಗಳು ವಿವಿಧ ಕಂಪನಿಗಳ ವಿವಿಧ ವೇತನಗಳ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ಅತಿಹೆಚ್ಚು ವಾರ್ಷಿಕ 14 ಲಕ್ಷ ರೂ. ಅತಿ ಕಡಿಮೆ ವಾರ್ಷಿಕ 4 ಲಕ್ಷ ರೂ.ಗಳಾಗಿದ್ದು ಸರಾಸರಿ ವಾರ್ಷಿಕ 5 ಲಕ್ಷ ರೂ. ವೇತನದ ಉದ್ಯೋಗಗಳನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ.

ಈ ಸಾಧನೆಗೆ ನಿರಂತರ ತರಬೇತಿಯನ್ನು ವಿವಿಧ ಹಂತಗಳಲ್ಲಿ ಪರಿಣಿತರಿಂದ ನೀಡಲಾಗಿದ್ದು ಶೈಕ್ಷಣಿಕ ಕಲಿಕೆಯ ಜೊತೆಗೆ ಕ್ಯಾಂಪಸ್ ಆಯ್ಕೆಯ ಸಿದ್ಧತೆಯ ತರಬೇತಿಯೂ ಸಹ ಸಮಾನಾಂತರವಾಗಿ ಕೈಗೊಳುತ್ತಿದ್ದು ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಒಂದಲ್ಲ ಒಂದು ಕಂಪನಿಗಳ ಉದ್ಯೋಗ ಪಡೆದುಕೊಳ್ಳುತ್ತಿದ್ದಾರೆ.

ವಿವಿಧ ಕಂಪನಿಗಳಿಗೆ ಕಾಲೇಜಿನ ವಿದ್ಯಾರ್ಥಿಗಳಾದ ಜಯಪ್ರದಾ ವೈ.ಜಿ, ಮೋನಿಕಾ ಕೆ.ಎಂ, ಹುಜ್ಮಾ ಕೌಸರ್, ಸೂರಜ್ ಬಿ.ವಿ, ಅಂಜನ್ ಬಿ, ಅನುಪಮಾ.ವಿ, ಪ್ರಿಯಾ ಆರ್, ವರ್ಷಿಣಿ, ಮಾನಸ, ಹರ್ಷಿತಾ, ಮೋನಿಷಾ ಅವರುಗಳು ಆಯ್ಕೆಯಾಗಿದ್ದಾರೆ.

ಶ್ರೀದೇವಿ ಸಂಸ್ಥೆಯ ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್, ಡಾ.ನರೇಂದ್ರ ವಿಶ್ವನಾಥ್, ಶ್ರೀದೇವಿ ಡಾ.ಎನ್.ಚಂದ್ರಶೇಖರ್, ಡಾ.ಎಲ್. ಗಿರೀಶ್.ಎಲ್, ಮತ್ತು ಡಾ. ಚೇತನ್.ಎನ್. ಅವರು ಉಪಸ್ಥಿತರಿದ್ದರು.

■ ವರದಿ: ಎನ್. ಆನಂದ

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶ್ರೀದೇವಿ ವಿದ್ಯಾ ಮಂದಿರ ವಿದ್ಯಾರ್ಥಿನಿ ತುಮಕೂರು ಜಿಲ್ಲೆಗೆ ಪ್ರಥಮ



"ನಮ್ಮ ವಿದ್ಯಾರ್ಥಿನಿ ಕು.ಸಾಧೀಯಾಭಾನು ಅವರು ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ 2ನೇ ಸ್ಥಾನ, ತುಮಕೂರು ಜಿಲ್ಲೆಗೆ ಮೊದಲನೇ ಸ್ಥಾನ ಬಂದಿರುವುದು ನಮ್ಮ ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಕು.ಸಾಧೀಯಾಭಾನುರವರಿಗೆ ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಪಿ.ಯು.ಸಿ.ಯಲ್ಲಿ ಸೇರಬಯಸಿದರೆ ಉಚಿತ ಶಿಕ್ಷಣ ನೀಡುವುದಾಗಿ ಮತ್ತು ಆಕೆ ಯೋಗಕ್ಷೇಮವನ್ನು ನೋಡಿಕೊಳ್ಳುವುದಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್ ಅವರು ಆಕೆಗೆ ಅಭಿನಂದನೆ ಮಾಡುತ್ತಾ ತಿಳಿಸಿದರು. ಇದೇ ಸಂದರ್ಭದಲ್ಲಿ ಅವರು ನಮ್ಮ ಸಂಸ್ಥೆಯ 38 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಅಂಕಗಳನ್ನು ಪಡೆದಿರುತ್ತಾರೆ" ಎಂದರು.

ತುಮಕೂರು ನಗರದ ಶಿರಾರಸ್ತೆಯ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಕೆಲಸ ಮಾಡುತ್ತಿರುವ ಶ್ರೀದೇವಿ ವಿದ್ಯಾಮಂದಿರದ ಶಾಲೆಯ ವಿದ್ಯಾರ್ಥಿನಿ ಕು. ಸಾಧೀಯಾಭಾನು ಅವರು ಎಸ್‌ಎಸ್‌ಎಲ್‌ಸಿಯಲ್ಲಿ 625 ಕ್ಕೆ 624 (99.84%) ಅಂಕವನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ, ಪಡೆದ ಸಂದರ್ಭದಲ್ಲಿ ಅವರಿಗೆ ಏಪ್ರಿಲ್ 23 ರಂದು ಅಭಿನಂದನೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.



ಅಭಿನಂದನೆ ಸ್ವೀಕರಿಸಿದ ಕು.ಸಾಧೀಯಾಭಾನು ಅವರು "ಈ ನನ್ನ ಸಾಧನೆಗೆ ತಂದೆ–ಮಹಮ್ಮದ್ ಜಫ್ಹೀರ್‌ಉದ್ದೀನ್ ಮತ್ತು ತಾಯಿ – ವಹೀದಾ ಭಾನು ಅವರು ಪ್ರೇರಕರು. ನನ್ನ ತಂದೆ ಟೈಲರ್. ನನ್ನ ತಾಯಿ ಗೃಹಿಣಿ. ತಂದೆ–ತಾಯಿಯ ಸಹಕಾರ, ಆಶೀರ್ವಾದ ಹಾಗೂ ನನ್ನ ಸಹೋದರರ ಬೆಂಬಲ ನನ್ನ ಯಶಸ್ಸಿಗೆ ಕಾರಣವಾಗಿದೆ. ನನ್ನ ಯಶಸ್ಸಿನ ಗುಟ್ಟು ನಿರಂತರವಾಗಿ ಪಠ್ಯಕ್ರಮಗಳನ್ನು ಓದುವುದು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡುವುದಾಗಿತ್ತು. ಶ್ರೀದೇವಿ ವಿದ್ಯಾಮಂದಿರದ ಶಾಲೆ ಮತ್ತು ಅಲ್ಲಿನ ಅಧ್ಯಾಪಕರು ನನಗೆ ಎಲ್ಲಾ ರೀತಿಯಲ್ಲೂ ಮಾರ್ಗದರ್ಶನ ನೀಡಿದರು. ಅವರನ್ನು ಎಂದೂ ಮರೆಯುವ ಹಾಗಿಲ್ಲ. ಮುಂದೆ ಪಿ.ಯು.ಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು, ನೀಟ್‌ಪರೀಕ್ಷೆಯಲ್ಲಿ ಉನ್ನತ ರ‍್ಯಾಂಕ್‌ಗಳನ್ನು ಪಡೆದು, ಎಂ.ಬಿ.ಬಿ.ಎಸ್. ಪದವಿಯನ್ನು ಮುಗಿಸಿ, ಮೆಡಿಕಲ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು ಚರ್ಮರೋಗ ವೈದ್ಯೆಯಾಗಬೇಕು ಆಸೆಯಿದೆ."ಎಂದರು.

ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಡಾ.ರಮಣ್ ಆರ್ ಹುಲಿನಾಯ್ಕರ್, ಡಾ.ಲಾವಣ್ಯ, ರೂಪನಟೇಶ್, ಡಾ.ನರೇಂದ್ರ ವಿಶ್ವನಾಥ್, ಶ್ರೀದೇವಿ ವಿದ್ಯಾಮಂದಿರದ ಮುಖ್ಯಶಿಕ್ಷಕರಾದ ಆರ್. ವಿಜಯ್‌ಕುಮಾರ್, ಶ್ರೀದೇವಿ ಶಿಕ್ಷಣ ಸಂಸ್ಥೆಯ ಶಿಕ್ಷಣಾಧಿಕಾರಿ ರಂಗಧಾಮಯ್ಯ, ಶ್ರೀದೇವಿ ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅಂಜಯ್.ಸಿ. ಮತ್ತು ತುಮಕೂರು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರೊ. ಹನುಮಂತಪ್ಪ ಅವರುಗಳು ವಿದ್ಯಾರ್ಥಿನಿಯನ್ನು ಅಭಿನಂದಿಸಿದರು.

■ ವರದಿ: ಎನ್. ಆನಂದ

## ಶ್ರೀದೇವಿ ಸಮೂಹಶಿಕ್ಷಣ ಸಂಸ್ಥೆಯ ಲೆಕ್ಕಪರಿಶೋಧಕ ವಿಕ್ಟರ್ ಪ್ರಸಾದ್‌ಗೆ ಅಭಿನಂದನೆ



ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಏಪ್ರಿಲ್ 21ರಂದು ತಮ್ಮ ಸಂಸ್ಥೆಯಲ್ಲಿ ಕಳೆದ ಇಪ್ಪತ್ತು ವರ್ಷಗಳ ಕಾಲ ನಿರಂತರವಾಗಿ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸಿರುವ ವಿಕ್ಟರ್ ಪ್ರಸಾದ್ ಅವರಿಗೆ ಮೈಸೂರುಪೇಟಾ ತೊಡಿಸಿ, ಫಲಪುಷ್ಪ ನೀಡಿ ಅಭಿನಂದನೆ ಸಲ್ಲಿಸಿದರು. ಅವರ ಜೊತೆಗೆ ಡಾ.ರಮಣ್ ಎಂ ಹುಲಿನಾಯ್ಕರ್, ಡಾ.ಲಾವಣ್ಯ ರಮಣ್, ಶ್ರೀಮತಿ ರೂಪನಟೇಶ್, ಡಾ.ನರೇಂದ್ರ ವಿಶ್ವನಾಥ್, ಮತ್ತು ಡಾ.ಎಂ.ಎಲ್.ಹರೇಂದ್ರಕುಮಾರ್ ಉಪಸ್ಥಿತರಿದ್ದರು.

# ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು - ಅಮೆರಿಕದ AQMATiCS Inc. ಕಂಪನಿ ನಡುವೆ ಒಪ್ಪಂದ

ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್ ಮತ್ತು ತಂತ್ರಜ್ಞಾನ ಸಂಸ್ಥೆ (SIET) ಮತ್ತು ಅಮೆರಿಕದ ಟೆಕ್ಸಾಸ್ ರಾಜ್ಯದ ಮೆಕಿನಿ ನಗರದ AQMATiCS Inc. ಕಂಪನಿಯ ನಡುವೆ ಐದು ವರ್ಷಗಳ ಅವಧಿಗೆ ಪರಸ್ಪರ ಸಹಕಾರ ತಿಳುವಳಿಕೆಯ ಒಂದು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದಕ್ಕೆ ಅಮೆರಿಕದ ಕಂಪನಿ ನಿರ್ದೇಶಕ ವೆಂಕಟ್ ಮುರಮಲ್ಲ (Venkat Muramalla) ಮತ್ತು ಕಾಲೇಜಿನ ಪ್ರಿನ್ಸಿಪಾಲ್ ಡಾ. ನರೇಂದ್ರ ವಿಶ್ವನಾಥ್ ಸಹಿ ಹಾಕಿದರು.



ಈ ಸಂದರ್ಭದಲ್ಲಿ ಡಾ. ನರೇಂದ್ರ ವಿಶ್ವನಾಥ್ ಮಾತನಾಡಿ, "ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಕೃತಕ ಬುದ್ಧಿಮತ್ತೆ ಭವಿಷ್ಯದ ಪ್ರಮುಖ ತಂತ್ರಜ್ಞಾನಗಳಾಗಿದ್ದು, ಇವುಗಳಲ್ಲಿ ವಿದ್ಯಾರ್ಥಿಗಳು ಪರಿಣತಿಯನ್ನು ಗಳಿಸಿದರೆ ಜಾಗತಿಕ ಮಟ್ಟದಲ್ಲಿ ಹೆಚ್ಚು ಅವಕಾಶ ದೊರೆಯುತ್ತದೆ" ಎಂದರು.

ಅಮೆರಿಕದ ಕಂಪನಿಯ ವೆಂಕಟ್ ಮುರಮಲ್ಲ ಅವರು ಮಾತನಾಡಿ, "ಉದ್ಯಮದ ಅಗತ್ಯಗಳಿಗೆ ಹೊಂದಿಕೊಳ್ಳುವ ಕೌಶಲವನ್ನು ರೂಢಿಸಿಕೊಂಡರೆ ಮಾತ್ರ ನಮ್ಮ ಕಂಪನಿಯ ಮೂಲಕ ನಿಮಗೆ ಪ್ರಾಜೆಕ್ಟ್‌ಗಳು ಮತ್ತು ತರಬೇತಿಗೆ ಅವಕಾಶ ದೊರೆಯಲಿದೆ" ಎಂದರು.

ಈ ಒಪ್ಪಂದ ಸಮಾರಂಭದ ಸಂದರ್ಭದಲ್ಲಿ ಅಮೆರಿಕನ್ ಕಂಪನಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಅಂತಿಮ ವರ್ಷದ ಕೆಲವು ವಿದ್ಯಾರ್ಥಿಗಳನ್ನು ನೇಮಿಸಿಕೊಂಡು ಅವರಿಗೆ ಆಫರ್ ಲೆಟರ್‌ಗಳನ್ನು ನೀಡಿತು. ಇದು ಶ್ರೀದೇವಿ ಸಂಸ್ಥೆಯ ಮಹತ್ವದ ಸಾಧನೆಯಾಗಿದ್ದು, ವಿದ್ಯಾರ್ಥಿಗಳಲ್ಲಿ ಉತ್ಸಾಹವನ್ನು ಮೂಡಿಸಿತು. ಸಂಸ್ಥೆಯ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್, ನಿರ್ದೇಶಕರಾದಎಂ.ಎಸ್. ಪಾಟೀಲ್ ಹಾಗೂ ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಟ್ರಸ್ಟಿಗಳಾದ ಶ್ರೀಮತಿಅಂಬಿಕಾ ಎಂ. ಹುಲಿನಾಯ್ಕರ್, ಡಾ. ರಮಣ್ ಎಂ. ಹುಲಿನಾಯ್ಕರ್ ಹಾಗೂ ಡಾ. ಲಾವಣ್ಯಅವರು ಹಾಜರಿದ್ದು "ಇದು ಕಾಲೇಜಿನ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸಿ, ಉನ್ನತ ಮಟ್ಟದ ಜ್ಞಾನ ಮತ್ತು ಉದ್ಯೋಗಗಳ ಅವಕಾಶವನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ" ಎಂದು ಶುಭವನ್ನು ಹಾರೈಸಿದ್ದಾರೆ.

ಈ ಒಪ್ಪಂದವು ವಿದ್ಯಾರ್ಥಿಗಳಿಗೆ ಉದ್ಯಮ-ಸಂಬಂಧಿತ ತರಬೇತಿ, ಇಂಟರ್ನ್‌ಶಿಪ್‌ಗಳು, ಸಂಶೋಧನೆಗಳಿಗೆ ಅವಕಾಶ ಮತ್ತು ಆಧುನಿಕ ತಂತ್ರಜ್ಞಾನಗಳಲ್ಲಿ ಅನುಭವ ನೀಡುವುದರ ಜೊತೆಗೆ ವಿವಿಧ ಉದ್ಯಮ ಕ್ಷೇತ್ರಗಳ ನಡುವಿನ ಅಂತರ ಕಡಿಮೆ ಮಾಡುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ.

ಇಂಜಿನಿಯರಿಂಗ್ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ.ಎಸ್.ಚಂದ್ರಶೇಖರ್ ಎಲ್ಲಾ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಹಾಗೂ ಅಮೆರಿಕನ್ ಕಂಪನಿಯ ಪ್ರತಿನಿಧಿಗಳಾದ ಸುದರ್ಶನ್, ಅಜರ್ ಹುಸೇನ್, ಮತ್ತು ರೋಶನ್ ನಾಯರ್‌ಅವರುಗಳು ಈ ಸಂದರ್ಭದಲ್ಲಿ ಉಪಸ್ಥಿತಿರಿದ್ದರು.

■ ವರದಿ: ಎನ್. ಆನಂದ

# ಶ್ರೀ ದೇವಿಯ ಮಡಿಲಲ್ಲಿ ಶ್ರೀ ಉತ್ಸವದ ಚಿತ್ತ ಚಿತ್ತಾರ

ಕಾಲೇಜಿನ ದಿನಾಚರಣೆ ಎಂದರೆ ವಿದ್ಯಾರ್ಥಿಗಳ ಪಾಲಿಗೆ ಹಬ್ಬ. ಮದುವೆ ಮನೆಯನ್ನೂ ಮೀರಿಸುವ ಸಡಗರ ಸಂಭ್ರಮ ಅವರನ್ನು ಆವರಿಸಿಕೊಳ್ಳುತ್ತದೆ. ಕಾಲೇಜಿನ ಅಂಗಳವು ಬಣ್ಣ ಬಣ್ಣದ ಚಿತ್ತಾರಗಳಿಂದ ಮಿನುಗುತ್ತದೆ. ಮಾರ್ಚ್ 26ರಂದು ಶ್ರೀದೇವಿ ಕಾಲೇಜು ಆವರಣ ಬಣ್ಣದ ಚಿತ್ತಾರಗಳಿಂದ ತುಂಬಿ ಹೋಗಿತ್ತು. ಅಲ್ಲಿ ಭಾರತೀಯ ಸಾಂಪ್ರದಾಯಿಕ ಮಲ್ಲಿಗೆ ಮುಡಿದು, ಜರತಾರಿ ಸೀರೆಗಳನ್ನುಟ್ಟ ವಿದ್ಯಾರ್ಥಿನಿಯರಿಂದ ಮತ್ತು ಪಂಚೆ ಜುಬ್ಬ ಧರಿಸಿದ್ದ ಅಧ್ಯಾಪಕರಿಂದ ಆವರಣಕ್ಕೆ ವಿಶೇಷ ಕಳೆಕಟ್ಟಿತ್ತು.




ವೇದಿಕೆ ಕಾರ್ಯಕ್ರಮ ಆರಂಭಕ್ಕೆ ಮುನ್ನ ಮತ್ತು ಕಾರ್ಯಕ್ರಮದ ನಂತರ ವರ್ಣರಂಜಿತ ವೇದಿಕೆಯಲ್ಲಿ ಕುಣಿದು ಕುಪ್ಪಳಿಸಿದರು. ಹಾಡು, ಸಂಗೀತ, ನೃತ್ಯ ಹೀಗೆ ಎರಡು ದಿನ ಕಳೆದ್ದು ಗೊತ್ತಾಗಲೇ ಇಲ್ಲ! ಅಪ್ಪರಮಟ್ಟಿಗೆ ಶ್ರೀಉತ್ಸವ ರಸಪೂರ್ಣವಾಗಿತ್ತು, ಅರ್ಥಪೂರ್ಣವಾಗಿತ್ತು.

**ವೇದಿಕೆಯ ಮೇಲಿನ ಕಾರ್ಯಕ್ರಮ**

"ಬೆಳಗಾವಿಯ ತಾಂತ್ರಿಕ ಶಿಕ್ಷಣ ವಿದ್ಯಾಲಯದ ಬೋಧನೆ ಮತ್ತು ಪಠ್ಯಕ್ರಮ ಜಗತ್ತಿಗೆ ಮಾದರಿಯಾಗಿದೆ" ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅಭಿಪ್ರಾಯ ಪಟ್ಟರು. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾ.26ರಂದು ಏರ್ಪಡಿಸಿದ್ದ ಎರಡು ದಿನಗಳ ಶ್ರೀಉತ್ಸವ-2026ಕ್ಕೆ ಚಾಲನೆ ನೀಡಿ ಉಪಕುಲಪತಿಗಳು ಮಾತನಾಡುತ್ತಾ "ಕೃತಕ ಬುದ್ಧಿಮತ್ತೆ ಬೆಳೆದಷ್ಟು ಉದ್ಯೋಗಾವಕಾಶಗಳು ಕಡಿಮೆಯಾಗಲಿದೆ ಎಂಬ ಆತಂಕದಲ್ಲಿ ಸತ್ಯಾಂಶವಿಲ್ಲ. ಆದರೆ ಕೃತಕ ಬುದ್ಧಿಮತ್ತೆಯನ್ನು ಮೀರಿ ಬೆಳೆಯುವಂತಹ ಅವಕಾಶಗಳನ್ನು ನಾವು ಸೃಷ್ಟಿಸಿಕೊಳ್ಳದೇ ಹೋದಲ್ಲಿ ಮನುಷ್ಯ ಅನುಪಯುಕ್ತವಾದ ವಸ್ತುವಾಗುತ್ತಾನೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹೀಗಾಗಿ 2030ರ ವೇಳೆಗೆ ಕೃತಕ ಬುದ್ಧಿಮತ್ತೆಯನ್ನು ನಿಯಂತ್ರಿಸಲು ಇಂದಿನಿಂದಲೇ ನಮ್ಮ ಪ್ರಯತ್ನಗಳನ್ನು ಮತ್ತು ಹೊಸ ಹೊಸ ಆಲೋಚನೆ, ಸಂಶೋಧನೆ ಮತ್ತು ನಾವೀನ್ಯಕ್ಕೆ ಹೆಚ್ಚು ಗಮನ ಕೊಡಬೇಕು.

"ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಠ್ಯಕ್ರಮ ಶೈಕ್ಷಣಿಕ ಕ್ರಮ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮವಾಗಿದೆ. ಹೀಗಾಗಿ ನಮಗೆ ಮಾನ್ಯತೆ ಕೊಡಿ ಎಂದು, ಸೌದಿ ಅರೇಬಿಯಾ, ಆಸ್ಟ್ರೇಲಿಯಾ, ದಕ್ಷಿಣ ಅಮೇರಿಕಾ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳು ನಮ್ಮ ವಿಶ್ವವಿದ್ಯಾಲಯಕ್ಕೆ ಮನವಿ ಮಾಡುತ್ತಿವೆ. ಬರುವ 2030ರ ವೇಳೆಗೆ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಈಗ ಮಾಡುತ್ತಿರುವ ಕೆಲಸಗಳು ಇರುವುದಿಲ್ಲ. ಬದಲಾಗಿ ಹೊಸ ಹೊಸ ಉದ್ಯೋಗಗಳು ಹುಟ್ಟಿಕೊಳ್ಳುತ್ತವೆ. ಜಗತ್ತಿನಲ್ಲಿ ಜ್ಞಾನಕ್ಕಿಂತ ದೊಡ್ಡದು ಯಾವುದೂ ಇಲ್ಲ. ವಿದ್ಯಾರ್ಥಿಗಳು ಗುರಿಯೊಂದಿಗೆ ಜ್ಞಾನ ಸಂಪಾದನೆ, ಸಾಧನೆಗೆ ಗಮನ ಕೊಡಬೇಕು. ಸಿನಿಮಾ ಹೀರೋಗಳು ನಿಮ್ಮ ಆದರ್ಶವಲ್ಲ. ಬದಲಿಗೆ ನೀವೇ ಹೀರೋಗಳಾಗಿ ಸಾಧನೆ ಮಾಡಿ.

"ಶ್ರೀದೇವಿ ಇಂಜಿನಿಯರಿಂಗ್ ಕಾಲೇಜನ್ನು ರಾಜ್ಯದ ಮಾದರಿ ಕಾಲೇಜನ್ನಾಗಿ ರೂಪಿಸುವಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರ ಪ್ರಯತ್ನಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಈ ಸಂಸ್ಥೆ ತುಮಕೂರು ಸುತ್ತಮುತ್ತಣ ಭಾಗದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ" ಎಂದರು.

ಮುಖ್ಯ ಅತಿಥಿಗಳಾಗಿ ಗ್ರೀನ್‌ವೇ ಹೆಲ್ತ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎನ್.ಎಲ್.ಎಸ್.ಮೂರ್ತಿಯವರು ಮಾತನಾಡಿ "ಹೆಚ್ಚಿನ ಕೌಶಲಗಳನ್ನು ಬೆಳೆಸಿಕೊಂಡರೆ ಕೃತಕ ಬುದ್ಧಿಮತ್ತೆಯ ಮುಂದೆ ಅಸಹಾಯಕರಾಗದೆ ಅದನ್ನು ಇನ್ನೂ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಿಕೊಳ್ಳಲು ನಾವು ದುಡಿಸಿಕೊಳ್ಳುವುದು ನಮಗೆ ಸಾಧ್ಯವಾಗಬಹುದು" ಎಂದರು.

ಇಂಜಿನಿಯರಿಂಗ್ ಕ್ಷೇತ್ರದ ಯುವ ಪ್ರತಿಭೆಗಳ ಪೋಷಕರು ಮತ್ತು ಅನೇಕ ಕಂಪನಿಗಳ ಮಾನವಸಂಪನ್ಮೂಲ ವ್ಯಕ್ತಿಗಳಾಗಿರುವ ಸಿ.ಎನ್. ಮಹಾಂತೇಶ್ ಮಾತನಾಡಿ, "ಯುವಜನಾಂಗ ಹೊಸ ಚಿಂತನೆಗೆ ಹೆಚ್ಚಿನ ಒತ್ತನ್ನು ನೀಡಬೇಕು. ಪ್ರತಿ ಮೂರು ಅಥವಾ ಆರು ತಿಂಗಳಿಗೊಮ್ಮೆ ಹೊಸ ಹೊಸ ಆವಿಷ್ಕಾರಗಳನ್ನು ಕುರಿತು ಚಿಂತನೆ ಮಾಡುವ ಸಾಮರ್ಥ್ಯವನ್ನುಮತ್ತು ಹೊಸದನ್ನು ಕಲಿಯುವ ಉತ್ಸಾಹವನ್ನು ವೃದ್ಧಿಸಿಕೊಳ್ಳಬೇಕು" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಮಾತನಾಡಿ, "ತಾಂತ್ರಿಕ ಶಿಕ್ಷಣದಲ್ಲಿ ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯ ಅತ್ಯುತ್ತಮ ಕೆಲಸ ಮಾಡಿದೆ. ಮಾಡುತ್ತಲೂ ಇದೆ. ಅದರ ಪಠ್ಯಕ್ರಮಕ್ಕೆ ಅಂತಾರಾಷ್ಟ್ರೀಯ ಮಾನ್ಯತೆ, ಬೇಡಿಕೆ ಹೆಚ್ಚಾಗುತ್ತಿರುವುದು, ತಾಂತ್ರಿಕ ಶಿಕ್ಷಣದಲ್ಲಿ ಮಾಡಿರುವ ಸಾಧನ ಬೇರೆಯವರಿಗೆ ಮಾದರಿ" ಎಂದರು.

ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್.ಪಾಟೀಲ್ ಅವರು "ತಂತ್ರಜ್ಞಾನ ವಿಕಾಸವಾದಂತೆ ಉದ್ಯೋಗ ಕಡಿಮೆಯಾಗುತ್ತದೆ ಎಂಬ ಆತಂಕ ಸಹಜ. ಆದರೆ ಇದರಲ್ಲಿ ಸತ್ಯಾಂಶವಿಲ್ಲ" ಎಂದರು. ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಟ್ರಸ್ಟಿ ಶ್ರೀಮತಿಅಂಬಿಕಾ ಎಂ. ಹುಲಿನಾಯ್ಕರ್ ಅವರು "ಕಾಲೇಜಿನಲ್ಲಿ ಕಲಿಯುವ ವಿದ್ಯಾಭ್ಯಾಸ ಒಂದು ಭಾಗವಾದರೆ ಅನಿಶ್ಚಿತ ಪರಿಸ್ಥಿತಿ ಎದುರಿಸುವಂತಹ ಶಕ್ತಿಯನ್ನು ರೂಢಿಸಿಕೊಳ್ಳಬೇಕು. ಹೊಸದನ್ನು ಕಲಿಯುವ ಪ್ರಯತ್ನ ಮಾಡಿದರೆ ಭವಿಷ್ಯಕ್ಕೆ ಹೆದರುವ ಪರಿಸ್ಥಿತಿ ಬರುವುದಿಲ್ಲ" ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಡಾ. ರಮಣ್ ಹುಲಿನಾಯ್ಕರ್ ಹಾಗೂ ನೇತ್ರತಜ್ಞೆ.ಡಾ.ಲಾವಣ್ಯ ರಮಣ್ ಪಾಲುಗೊಂಡಿದ್ದರು. ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ನರೇಂದ್ರ ವಿಶ್ವನಾಥ್ ಅತಿಥಿಗಳನ್ನು ಸ್ವಾಗತಿಸಿದರು.

■ ವರದಿ: ಕೆ.ಎಸ್. ರಾಜಮನ್ನಾರ್

## ಶ್ರೀದೇವಿ ಅಲೈಡ್ ಹೆಲ್ತ್‌ಸೈನ್ಸ್ ಮತ್ತು MAHSAಗಳ ನಡುವೆ ಶೈಕ್ಷಣಿಕ ಒಡಂಬಡಿಕೆ

▶▶ ಮೊದಲನೇ ಪುಟದಿಂದ

ಕಾರ್ಯಕ್ರಮದಲ್ಲಿ ಮಲೇಶಿಯಾ ವಿಶ್ವವಿದ್ಯಾಲಯದ ಉಪಕುಲಪತಿ ಹಾಗೂ ಸಹಾಯಕ ಪ್ರೊ.ಡಾ.ವೆರೋನಿಕಾ ಚುವಾ ಪೋಹ್‌ಚೂ ಮಾತನಾಡುತ್ತಾ ಅವರು "ಈ ಒಪ್ಪಂದವು ಎರಡೂ ದೇಶಗಳ ಆರೋಗ್ಯವಲಯಗಳಿಗೆ ಉತ್ತಮ ಕೊಡುಗೆಯಾಗಲಿ"ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಶ್ರೀದೇವಿ ವೈದಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು ಮಾತನಾಡುತ್ತಾ "ಅಲೈಡ್ ಹೆಲ್ತ್‌ಸೈನ್ಸ್ ವಿಭಾಗದ ವಿದ್ಯಾರ್ಥಿಗಳಿಗೆ ಇಂತಹ ಸಮ್ಮೇಳನವು ತಮ್ಮ ನಿಪುಣತೆ ಹಾಗೂ ಸೇವಾ ಮನೋಭಾವ ಉತ್ತಮಗೊಳಿಸಿಕೊಳ್ಳಲು ಅತ್ಯುತ್ತಮ ವೇದಿಕೆಯನ್ನು ಕಲ್ಪಿಸುತ್ತದೆ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಮಾತನಾಡುತ್ತಾ "ವೈದ್ಯಕೀಯ ಕ್ಷೇತ್ರವು ಇಂದು ಯುವ ಸಂಶೋಧಕರನ್ನು ಕೈಬೀಸಿ ಕರೆಯುತ್ತಿದೆ. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಹಾಗೂ MAHSA ನಡುವೆ ಇಂದು ಏರ್ಪಟ್ಟಿರುವ ಒಡಂಬಡಿಕೆಯು ಮುಂಬರುವ ದಿನಗಳಲ್ಲಿ ಪರಸ್ಪರ ಜ್ಞಾನದ ವಿನಿಮಯದ ಮೂಲಕ ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತ ಮಟ್ಟದ ಸಂಶೋಧನೆಗೆ ಕಾರಣೀಭೂತವಾಗಲಿದೆ" ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಅಲೈಡ್ ಹೆಲ್ತ್‌ಸೈನ್ಸ್ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣರವರು ಸ್ವಾಗತಿಸಿದರು. ಡಾ.ವಿ.ಪವಿತ್ರರವರು ಕಾರ್ಯಕ್ರಮ ನಿರೂಪಿಸಿದರು. ಇದೇ ಕಾರ್ಯಕ್ರಮದಲ್ಲಿ "ಶ್ರೀದೇವಿ ಅಂತರಂಗ" ಮಾಸಪತ್ರಿಕೆಯ ಮಾರ್ಚ್ ತಿಂಗಳ ಇಂಗ್ಲಿಷ್ ಸಂಚಿಕೆಯನ್ನು MAHSAದ ಮಲೇಷಿಯಾ ವಿಶ್ವವಿದ್ಯಾಲಯದ ಕುಲಪತಿಯವರು ಬಿಡುಗಡೆ ಮಾಡಿದರು. ಅದರ ಗುಣಮಟ್ಟದ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದರು. ಕಾರ್ಯಕ್ರಮದ ಅಂಗವಾಗಿ ವೃಕ್ಷಕ್ಕೆ ನೀರೆರೆಯಲಾಯಿತು.

Printed and Published by **Shridevi Media Center**, Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press**, No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**